ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 6 । ಸಂಚಿಕೆ : 6 । ಜೂನ್ - 2024 । ಪುಟಗಳು : 20 । ಬೆಲೆ : 25/-

## ಜೂನ್ 1 : ವಿಶ್ವ ಹಾಲು ದಿನಾಚರಣೆ

## ಹಾಲು ಉತ್ಪಾದನೆಯಲ್ಲಿ ಭಾರತ ಅಗ್ರ ಸ್ಥಾನ, ಸಹಕಾರ ಸಂಸ್ಥೆಗಳ ಪಾತ್ರ ಹಿರಿದು



## ಜೂನ್ 5 : ವಿಶ್ವ ಪರಿಸರ ದಿನಾಚರಣೆ

## ಧ್ಯೇಯ : "ನಮ್ಮ ಭೂಮಿ – ನಮ್ಮ ಭೂಮಿಯ ಪುನಃ ಸ್ಥಾಪನೆ ಇಂದಿನ ಅಗತ್ಯ



# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತ ಮಂಡಳಿ



ಶಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ



ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು

ಬೆಂಗಳೂರು



ಶ್ರೀ ವಿ. ರಾಜು
ಅಧ್ಯಕ್ಷರು



ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ನಿರ್ದೇಶಕರು



ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು



ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು



ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು



ಶ್ರೀ ಎಂ.ಜೆ. ನರೇಂದ್ರ ಕುಮಾರ
ನಿರ್ದೇಶಕರು



ಶ್ರೀ ಡಿ. ಚನ್ನಯ್ಯ
ನಿರ್ದೇಶಕರು



ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು



ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು



ಶ್ರೀ ಧರೇಪ್ಪ ಎಂ. ಆಲಗೂರ
ನಿರ್ದೇಶಕರು




ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು



ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು



ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು



ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು



ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು



ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು



ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು



ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು



ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು



ಶ್ರೀ ಪ್ರಜ್ವಲ್ ಕೆ.ಎನ್.
ಮುಖ್ಯಕಾರ್ಯನಿರ್ವಹಣಾಧಿಕಾರಿ

# ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ.,

ನಂ.32 , 3ನೇ ಮಹಡಿ, ಡಿ. ದೇವರಾಜ ಅರಸ್ ರಸ್ತೆ (ರೇಸ್ ಕೋರ್ಸ್ ರಸ್ತೆ)
ಬೆಂಗಳೂರು–560001 ದೂರವಾಣಿ–080–22268018/19

ಸಂಖ್ಯೆ:ಶಾವಿ/9/2024–25 ದಿನಾಂಕ: .05.2024

## ಡಿಪ್ಲೊಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ (ಡಿ.ಸಿ.ಎಂ) ತರಬೇತಿಗೆ ಅರ್ಜಿ ಆಹ್ವಾನ

ಪ್ರವೇಶ
ದಿ:01.07.2024
ಪ್ರಾರಂಭ

### ಕರ್ನಾಟಕದಾದ್ಯಂತ 8 ಸಹಕಾರ ತರಬೇತಿ ಕೇಂದ್ರಗಳ ಮೂಲಕ ತರಬೇತಿ

### 2024-2025 (ಜುಲೈ–ಡಿಸೆಂಬರ್ ಬ್ಯಾಚ್)

### ದೂರ ಶಿಕ್ಷಣ ಡಿ.ಸಿ.ಎಂ ಕೋರ್ಸ್

(ಸಹಕಾರ ಸಂಘ / ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಮಾತ್ರ)

### ಕೋರ್ಸ್ ಅವಧಿ: 6 ತಿಂಗಳು

- ಸಂಪರ್ಕ ರಹಿತ ಕೋರ್ಸ್ ಪ್ರವೇಶಕ್ಕೆ ಅವಕಾಶ.
- ಅಧ್ಯಯನ ಸಾಹಿತ್ಯ ನೀಡಲಾಗುವುದು.
- 10 ದಿನಗಳ ಸಂಪರ್ಕ ತರಗತಿಗಳು.
- ಪದೋನ್ನತಿ ಹಾಗೂ ವಾರ್ಷಿಕ ಬಡ್ತಿಗೆ ಉಪಯುಕ್ತ.
- "ಈಗಾಗಲೇ ರಾಜ್ಯದಲ್ಲಿ ಸುಮಾರು 30000 ಸಹಕಾರಿ ಉದ್ಯೋಗಿಗಳು ತರಬೇತಿಯನ್ನು ಪಡೆದಿದ್ದಾರೆ, ಸಹಕಾರ ಕ್ಷೇತ್ರದ ಬಗ್ಗೆ ಅರಿವಿಗಾಗಿ ನಿಮಗೀಗ ಸುವರ್ಣಾವಕಾಶ"
- ಅರ್ಜಿಗಳನ್ನು ತರಬೇತಿ ಸಂಸ್ಥೆಗಳಲ್ಲಿ ಅಥವಾ ಆನ್‌ಲೈನ್ ಮೂಲಕ ಸಹ ಸಲ್ಲಿಸಬಹುದಾಗದೆ.

**ತರಬೇತಿ ನೀಡುವ 8 ಕೆ.ಐ.ಸಿ.ಎಂ ಕೇಂದ್ರಗಳು**

ಧಾರವಾಡ
ಮಡಿಕೇರಿ
ಮೈಸೂರು
ಕಲಬುರಗಿ
ಬೆಂಗಳೂರು
ಶಿವಮೊಗ್ಗ
ಮೂಡುಬಿದಿರೆ
ಬೆಳಗಾವಿ


ಆನ್‌ಲೈನ್ ಪ್ರವೇಶಾತಿಯ ಲಿಂಕ್: www.kscfdcm.co.in

ವ್ಯವಸ್ಥಾಪಕ ನಿರ್ದೇಶಕರು

---

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಧಾರವಾಡ: 0836–2442349/8317383188, ಮಡಿಕೇರಿ: 0827–2228437/9845318364, ಮೈಸೂರು: 0821–2520563/9141574147, ಕಲಬುರಗಿ : 0847–2245340/9916726886, ಬೆಂಗಳೂರು: 080–26602046/9902189872, ಶಿವಮೊಗ್ಗ: 0818–2248873/7022429440, ಮೂಡುಬಿದಿರೆ : 08258–236561/9449075746, ಬೆಳಗಾವಿ: 0831–2950026/9449007661.

SAHAKARA VARTHA PATHRIKE KANNADA MONTHLY
RNI-Reg No. KARKAN/2018/75796
Post Reg No. KA-BGW/1816/2022-24
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 31st of Previous Month
License to post without prepayment
PMG BG/WPP-405/2022-2024




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು.
ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

Printed at : Biligiri Printers
Chamrajpet, Bengaluru - 18

## ಸಂಪಾದಕೀಯ



ವಿ. ರಾಜು
ಅಧ್ಯಕ್ಷರು

ಪತ್ತಿನ ಸಹಕಾರ ಸಂಘಗಳು ಹಲವು ಸಮಸ್ಯೆಗಳನ್ನು ಎದುರಿಸುತ್ತಿವೆ. ಪತ್ತಿನ ಮಹಾಮಂಡಳವು ಕಾಲಕಾಲಕ್ಕೆ ಈ ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸುತ್ತಲೇ ಬಂದಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪತ್ತಿನ ಸಹಕಾರ ಸಂಘಗಳ ಪೂರ್ಣ ಬೆಳವಣಿಗೆಗೆ ಅಗತ್ಯ ಕಾನೂನು ರೂಪಿಸಬೇಕಾಗಿದೆ. ಆದಾಯ ತೆರಿಗೆ ಇಲಾಖೆ ಪತ್ತಿನ ಸಹಕಾರ ಸಂಘಗಳಿಗೆ ಆದಾಯ ತೆರಿಗೆ ವಿನಾಯ್ತಿ ಘೋಷಿಸಿದಲ್ಲಿ ಸಂಘಗಳು ಮತ್ತಷ್ಟು ಕ್ರಿಯಾಶೀಲವಾಗಿ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಲು ನೆರವೇರಲಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಗಮನಹರಿಸುವುದು ಸೂಕ್ತವೆನಿಸುತ್ತದೆ.

### ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ :

# ಸಾರ್ಥಕತೆಯ ಎರಡು ದಶಕಗಳು

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು 2004ರ ವರ್ಷದಲ್ಲಿ ಪ್ರಾರಂಭಗೊಂಡು ಸಾರ್ಥಕತೆಯ ಎರಡು ದಶಕಗಳನ್ನು ಪೂರೈಸಿದೆ. ಬಿ.ಎಲ್. ಲಕ್ಕೇಗೌಡರು ಪತ್ತಿನ ಮಹಾಮಂಡಳದ ಸ್ಥಾಪನೆಗೆ ಪ್ರಮುಖ ಕಾರಣಕರ್ತರು. ಅವರ ನೇತೃತ್ವದಲ್ಲಿ ಆರಂಭಗೊಂಡ ಈ ಮಹಾಮಂಡಳದಲ್ಲಿ ನಾನೂ ಸಹ ಸಂಸ್ಥಾಪಕ ಉಪಾಧ್ಯಕ್ಷರಾಗಿ ನಾಲ್ಕು ಅವಧಿಗೆ ನಿರ್ದೇಶಕರಾಗಿ ಪ್ರಸ್ತುತ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಲು ಅವಕಾಶ ದೊರೆತಿರುವುದು ನನ್ನ ಸೌಭಾಗ್ಯವೂ ಹೌದು.

ಇಂದು ಪತ್ತಿನ ಸಹಕಾರ ಸಂಘಗಳು ರಾಜ್ಯದಲ್ಲಿ 5500ಕ್ಕೂ ಹೆಚ್ಚು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿವೆ. ಸಂಘಗಳ ಪ್ರಗತಿಗೆ ಆಡಳಿತ ಮಂಡಳಿಗಳ ನಿರ್ದೇಶಕರುಗಳ ಬದ್ಧತೆ, ಅಧಿಕಾರಿ ಸಿಬ್ಬಂದಿಗಳ ಸದೃಢತೆಯ ಜೊತೆಗೆ ಸದಸ್ಯರ ಭಾಗವಹಿಸುವಿಕೆಯನ್ನು ಶ್ಲಾಘಿಸಲೇಬೇಕಾಗುತ್ತದೆ.

ಪತ್ತಿನ ಸಹಕಾರ ಸಂಘಗಳು ಹಲವು ಸಮಸ್ಯೆಗಳನ್ನು ಎದುರಿಸುತ್ತಿವೆ. ಪತ್ತಿನ ಮಹಾಮಂಡಳವು ಕಾಲಕಾಲಕ್ಕೆ ಈ ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸುತ್ತಲೇ ಬಂದಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪತ್ತಿನ ಸಹಕಾರ ಸಂಘಗಳ ಪೂರ್ಣ ಬೆಳವಣಿಗೆಗೆ ಅಗತ್ಯ ಕಾನೂನು ರೂಪಿಸಬೇಕಾಗಿದೆ. ಪತ್ತಿನ ಸಹಕಾರ ಸಂಘಗಳಿಗೆ ಆದಾಯ ತೆರಿಗೆ ವಿನಾಯ್ತಿಯಿಂದ ಸಂಘಗಳು ಮತ್ತಷ್ಟು ಕ್ರಿಯಾಶೀಲವಾಗಿ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಲು ಸಹಕಾರಿಯಾಗಿದೆ.

ಸ್ಪರ್ಧಾತ್ಮಕ ಜಗತ್ತಿನಲ್ಲಿ ಆರ್ಥಿಕವಾಗಿ ಅಬಲರಾದ ಜನರ ಏಳಿಗೆಗಾಗಿ ಪತ್ತಿನ ಸಹಕಾರ ಸಂಘಗಳ ಸಂಖ್ಯೆ ಹೆಚ್ಚಳವಾಗಬೇಕಿದೆ. ಸದಸ್ಯರ ಭಾಗವಹಿಸುವಿಕೆ ಅತ್ಯಂತ ಮುಖ್ಯವಾದುದು. ಆರ್ಥಿಕವಾಗಿ ಅಬಲರಾದವರ ಏಳಿಗೆಯಿಂದ ಸಾಮಾಜಿಕ ಪರಿವರ್ತನೆ ಮಾಡುವುದು ಚಳುವಳಿಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಸಹಕಾರಿಗಳು ಚಿಂತನಮಂಥನ ನಡೆಸಬೇಕು.

ಪತ್ತಿನ ಸಂಘಗಳ ಸಹಕಾರ ಮಹಾಮಂಡಳದಲ್ಲಿ ಸದಸ್ಯತ್ವ ಪಡೆದು ಪತ್ತಿನ ಮಹಾಮಂಡಳವನ್ನು ಬಲಪಡಿಸುವುದರ ಜೊತೆಗೆ ಪತ್ತಿನ ಚಳುವಳಿಯನ್ನು ಪರಿಣಾಮಕಾರಿಗೊಳಿಸಿ ರಾಷ್ಟ್ರದಲ್ಲಿಯೇ ಕರ್ನಾಟಕ ರಾಜ್ಯವನ್ನು ಮಾದರಿ ರಾಜ್ಯವನ್ನಾಗಿ ಮಾಡುವ ನಿಟ್ಟಿನಲ್ಲಿ ಬದ್ಧತೆ ಪ್ರದರ್ಶಿಸೋಣ. ಇದಕ್ಕೆ ನಿಮ್ಮೆಲ್ಲರ ಸಹಕಾರ ಅಗತ್ಯ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀ ವಿ. ರಾಜು**
ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ**
ಸದಸ್ಯರು : **ಡಾ॥ ಸಂಜಯ ಪಿ. ಹೊಸಮಠ**
**ಶ್ರೀ ಎಂ.ಜಿ. ನರೇಂದ್ರಕುಮಾರ**
**ಶ್ರೀ ಕೆ. ಕೃಷ್ಣಮೂರ್ತಿ**
**ಶ್ರೀ ಡಿ.ಆರ್. ನಾಗೇಶಪ್ಪ**
**ಶ್ರೀ ಹೊನ್ನಯ್ಯ ವೀ ಹಿರೇಮಠ**
**ಶ್ರೀ ಚಿತ್ತರಂಜನ್ ಬೋಳಾರ್**
ಸಂಪಾದಕರು :
**ಪ್ರಜ್ವಲ್ ಕೆ.ಎನ್.**
ಮುಖ್ಯಕಾರ್ಯನಿರ್ವಹಣಾಧಿಕಾರಿ

# ಇಫ್ಕೋ ಅಧ್ಯಕ್ಷರಾಗಿ ದಿಲೀಪ್ ಸಂಘಾನಿ ಅವಿರೋಧ ಆಯ್ಕೆ



**ದೆಹಲಿ :** ಇತ್ತೀಚೆಗೆ ಇಫ್ಕೋ ಸಂಸ್ಥೆಯ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಇಫ್ಕೋ ಅಧ್ಯಕ್ಷರಾಗಿ ದಿಲೀಪ್ ಸಂಘಾನಿ ಮತ್ತೊಮ್ಮೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಆಯ್ಕೆಯ ನಂತರ ಭಾರತೀಯ ಸಹಕಾರಿಗಳೊಂದಿಗೆ ಮಾತನಾಡಿದ ಸಂಘಾನಿ, "ನನ್ನ ಮೇಲೆ ನಂಬಿಕೆ ಇಟ್ಟಿದ್ದಕ್ಕಾಗಿ ಮಂಡಳಿಯ ಸದಸ್ಯರಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ. ನ್ಯಾನೋ ಮತ್ತು ಡ್ರೋನ್‌ಗಳ ಹಿನ್ನೆಲೆಯಲ್ಲಿ ಈಗಾಗಲೇ ಹಲವು ಬದಲಾವಣೆಗಳ ಮಧ್ಯೆ ರಸಗೊಬ್ಬರ ಸಹಕಾರ ಸಂಘವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಪ್ರಯತ್ನ ನಡೆದಿದೆ ಎಂದರು. "ನಾವು IFFCO ನಲ್ಲಿ ಹೊಸದಾಗಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನ – ನ್ಯಾನೋ ಯೂರಿಯಾ ಮತ್ತು ನ್ಯಾನೋ ಆಂಕ ಬಗ್ಗೆ ಮಾಹಿತಿಯನ್ನು ಪ್ರಸಾರ ಮಾಡುವುದಲ್ಲದೆ, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ 'ಸಹಕಾರದಿಂದ ಸಮೃದ್ಧಿ'ಯ ದೃಷ್ಟಿಕೋನವನ್ನು ಸಾಧಿಸಲು ಒಟ್ಟಾಗಿ ಕೆಲಸ ಮಾಡುತ್ತೇವೆ" ಎಂದು ಹೇಳಿದರು.

ಇಫ್ಕೋ ಉಪಾಧ್ಯಕ್ಷರಾಗಿ ಬಲವೀರ್ ಸಿಂಗ್ ಆಯ್ಕೆಯಾಗಿದ್ದಾರೆ. ನಿರ್ದೇಶಕರುಗಳಾಗಿ ಜಗದೀಪ್ ಸಿಂಗ್ ನಕ್ಕೈ, ಉಮೇಶ ತ್ರಿಪಾಠಿ, ಪ್ರಹ್ಲಾದ್ ಸಿಂಗ್, ರಾಮ್‌ನಿವಾಸ್ ಗರ್ವಾಲ್, ಜಯೇಶಭಾಯಿ ವಿ.ರಾಡಾಡಿಯ, ರಿಷಿರಾಜ್ ಸಿಂಗ್ ಸಿಸೋಡಿಯಾ, ವಿವೇಕ್ ಬಿಪಿಂದಾದ್ ಕೋಲೆ, ಸಿಮಾಚಲ್ ಪಾಧಿ, ಕೆ. ಶ್ರೀನಿವಾಸಗೌಡ, ಎಸ್.ಶಕ್ತಿವೇಲ್, ಪ್ರೇಮ್‌ಚಂದ್ ಮುನ್ಷಿ, ಡಾ. ವರ್ಷಾ ಎಲ್. ಕಸ್ತೂರಕರ್, ಸುಧಾಂಶಪಂತ್, ಅಲೋಕ್‌ಕುಮಾರ್ ಸಿಂಗ್, ಜೆ. ಗಣೇಶನ್, ಡಾ.ಎಂ.ಎನ್ ರಾಜೇಂದ್ರಕುಮಾರ್, ಪಿ.ಪಿ ನಾಗಿರೆಡ್ಡಿ, ಬಾಲ್ಮಿಕಿ ತ್ರಿಪಾಠಿ, ಮಾರಗಂಗಾರೆಡ್ಡಿ ಅವರುಗಳು ಆಯ್ಕೆಯಾಗಿದ್ದಾರೆ.

**ಸುಭಾಷಿತ :** ಈಗ ಕಾಡುಗಳಿಲ್ಲದ, ಕಾಡು ಪ್ರಾಣಿಗಳಿಲ್ಲದ ಪರಿಸರವು ಸ್ಮಶಾನಕ್ಕಿಂತ ಭೀಕರವಾಗಿ ಕಾಣುತ್ತದೆ – ಪೂರ್ಣಚಂದ್ರ ತೇಜಸ್ವಿ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.



# ಸಹಕಾರ ಸಂಘಗಳಲ್ಲಿ ಮಾನವ ಸಂಪನ್ಮೂಲ

▸▸ ಬಸವೇಗೌಡ, ಸಹಕಾರ ಸಂಘಗಳ ಅಪರ ನಿಬಂಧಕರು (ನಿ), ಬೆಂಗಳೂರು

*Financial Resources may be the lifeblood of a company,*
*but human resources are the brains - Rob Silzer*

**ಒಂದು ಸಂಘ ಅಥವಾ ಸಂಸ್ಥೆಯು ಉದ್ದೇಶಗಳಿಗೆ ಅನುಗುಣವಾಗಿ ಆರ್ಥಿಕ ಚಟುವಟಿಕೆಗಳನ್ನು ನಡೆಸಬೇಕಾದರೆ ಬಂಡವಾಳವು ಅತ್ಯಗತ್ಯವಾಗಿರುತ್ತದೆ. ಬಂಡವಾಳ ಎಂದ ಕೂಡಲೇ, ಸಾಮಾನ್ಯವಾಗಿ, ಹಣದ ಬಗ್ಗೆ ಮಾತನಾಡಲಾಗುತ್ತದೆ. ಆದರೆ, ಒಂದು ಸಂಸ್ಥೆಯ ಯಶಸ್ಸಿಗೆ ಕೇವಲ ಹಣವಷ್ಟೇ ಅಲ್ಲದೆ ಬೇರೆ ವಿಧದ ಬಂಡವಾಳಗಳೂ ಇದ್ದು, ಅವು ಸಹ ಪ್ರಮುಖವಾಗಿರುತ್ತವೆ. ಸಾಮಾನ್ಯವಾಗಿ ಪ್ರಸ್ತಾಪಿಸುವಂತ ಬಂಡವಾಳಗಳೆಂದರೆ,**

**ಆರ್ಥಿಕ ಬಂಡವಾಳ (Financial Capital) :** ಇದು ಹಣಕಾಸಿಗೆ ಸಂಬಂಧಿಸಿದ್ದು, ಬಂಡವಾಳ ಸರಕುಗಳಾದ ಕಟ್ಟಡ, ಯಂತ್ರೋಪಕರಣ, ಇತ್ಯಾದಿಯನ್ನು ಕೊಂಡುಕೊಳ್ಳುವುದಕ್ಕೆ, ಆರ್ಥಿಕ ವ್ಯವಹಾರಗಳನ್ನು ನಿರ್ವಹಿಸುವುದಕ್ಕೆ ಬಳಸಲಾಗುತ್ತದೆ. ಮೂಲಗಳು – ನಗದು, ಈಕ್ವಿಟಿ, ಸಾಲಗಳು.

**ನೈಸರ್ಗಿಕ ಬಂಡವಾಳ (Natural Capital) :** ಸಂಸ್ಥೆಯ ಕಾರ್ಯದಲ್ಲಿ ಬಳಸುವ ನೈಸರ್ಗಿಕ ಸಂಪನ್ಮೂಲಗಳಾದ ಭೂಮಿ, ಖನಿಜ ವಸ್ತುಗಳು, ನೀರು ಮತ್ತು ಗಾಳಿಯನ್ನು ಒಳಗೊಂಡ ಪರಿಸರ ವ್ಯವಸ್ಥೆ.

**ಮಾನವ ಬಂಡವಾಳ (Human Capital) :** ಸಂಸ್ಥೆಯ ಲಾಭದಾಯಕ ಮುನ್ನಡೆಗೆ ನೆರವಾಗುವಂತ ಉದ್ಯೋಗಿಗಳ ಜ್ಞಾನ, ಕೌಶಲ್ಯ, ಸಾಮರ್ಥ್ಯ, ಅನುಭವ, ಇತ್ಯಾದಿಯನ್ನು ಮಾನವ ಬಂಡವಾಳವೆಂದು ಪರಿಗಣಿಸಲಾಗುತ್ತದೆ. ಇದು ಸಂಘ ಅಥವಾ ಸಂಸ್ಥೆಯ ಯಶಸ್ಸಿಗೆ ಮಹತ್ವದ ಕೊಡುಗೆಯನ್ನು ನೀಡುತ್ತದೆ.

**ಸಾಮಾಜಿಕ ಬಂಡವಾಳ (Social Capital) :** ಇದು ಹೆಚ್ಚಾಗಿ ಗೋಚರಿಸದ ಸಾಮಾಜಿಕ ಸಂಬಂಧಗಳ ಆಸ್ತಿಯಾಗಿದ್ದು, ಜನರು ಪರಸ್ಪರ ಹೊಂದಿರುವ ಸಂಬಂಧಗಳಿಗೆ ಅನ್ವಯಿಸುತ್ತದೆ. ಸಂಸ್ಥೆಯ ಹೊರಗೆ ಮತ್ತು ಒಳಗೆ ಕೆಲಸ ಮಾಡುವವರ ವೈಯಕ್ತಿಕ ಮತ್ತು ಜಾಲಬಂಧ ಸಂಬಂಧಗಳು ಪ್ರಗತಿಗೆ ನೆರವಾಗುತ್ತವೆ. ವಿಶ್ವಾಸ, ಸಂವಹನ, ಪರಸ್ಪರ ಅರಿವು, ವ್ಯವಸ್ಥಾಪನ ಸಾಮರ್ಥ್ಯ, ಈ ಎಲ್ಲಾ ಸಂಬಂಧಗಳು ಸಂಸ್ಥೆಯ ಬೆಳವಣಿಗೆಗೆ ಕೊಡುಗೆ ನೀಡುವಂತ ಸಾಮಾಜಿಕ ಬಂಡವಾಳವಾಗಿರುತ್ತವೆ.

ಇತ್ಯಾದಿ, ಪ್ರಯೋಜನಕಾರಿಯಾದ, ಹಣಕಾಸು ಮತ್ತು ಹಣಕಾಸೇತರ, ಸ್ಪಷ್ಟವಾಗಿ ಗೋಚರಿಸುವ ಹಾಗೂ ಗೋಚರಿಸದ ಬಂಡವಾಳಗಳಿರುತ್ತವೆ. ಇವೆಲ್ಲವೂ ಸಂಸ್ಥೆಯ ಅಪೇಕ್ಷಿತ ಆರ್ಥಿಕ ವ್ಯವಹಾರಗಳು ಪರಿಣಾಮಕಾರಿ ಯಾಗಿ ನಡೆಯುವುದಕ್ಕೆ ಬೇಕಾಗುವ ಬಂಡವಾಳಗಳಾಗಿದ್ದು, ಪ್ರಗತಿಯನ್ನು ಸಾಧಿಸಲು ಕಾಪಾಡಿಕೊಳ್ಳಬೇಕಾಗಿರುತ್ತದೆ.

ಸಹಕಾರ ಸಂಘಗಳು ವ್ಯಾಪಾರ ವ್ಯವಹಾರ ನಡೆಸುವ ವಾಣಿಜ್ಯ ಸಂಸ್ಥೆಗಳು. ಇವುಗಳ ಮುಖ್ಯ ಧ್ಯೇಯೋದ್ದೇಶವು ಸದಸ್ಯರಿಗೆ ಬೈಲಾ




ನಿಯಮಾನುಸಾರ ಯೋಗ್ಯ ಸೇವೆಗಳನ್ನು ಒದಗಿಸುವುದಾಗಿರುತ್ತದೆ. ಹೀಗಾಗಿ ಸಂಘಗಳು ಪರಿಣಾಮಕಾರಿಯಾದ ಸೇವೆಗಳನ್ನು ಒದಗಿಸಿ ಲಾಭದಾಯಕವಾಗಿ ಮುನ್ನಡೆಯಬೇಕಾದರೆ ಆರ್ಥಿಕ, ನೈಸರ್ಗಿಕ, ಮಾನವ, ಸಾಮಾಜಿಕ, ಇತ್ಯಾದಿ ಸೂಕ್ತ ಬಂಡವಾಳಗಳು ಬೇಕಾಗಿರುತ್ತವೆ. ಇತರೆಲ್ಲಾ ಬಂಡವಾಳಗಳು ಫಲದಾಯಕವಾಗಿ ಬಳಕೆಯಾಗಿ ಉತ್ಪಾದಕತೆ ಹೆಚ್ಚಬೇಕಾದರೆ ಮಾನವ ಬಂಡವಾಳವು ಮಹತ್ವದಿಂದ ಕೂಡಿರುತ್ತದೆ. ಯಾವುದೇ ಕ್ಷೇತ್ರದ ಸಂಸ್ಥೆಯಾಗಿರಲಿ, ಅದರ ಉದ್ಯೋಗಿಗಳ ಶಿಕ್ಷಣ, ಕೌಶಲ್ಯ, ತಾಂತ್ರಿಕ ಕೌಶಲ್ಯ, ಬುದ್ಧಿಶಕ್ತಿ, ಸೃಜನಶೀಲತೆ, ಅನುಭವ, ಸಮಸ್ಯೆಗಳನ್ನು ಪರಿಹರಿಸುವ ಜಾಣ್ಮೆ, ಮಾನಸಿಕ ಸ್ಪಷ್ಟತೆ, ಸಾಮರ್ಥ್ಯ – ಇದೆಲ್ಲವೂ ಮಾನವ ಬಂಡವಾಳಕ್ಕೆ ಸೇರಿದ ಆಸ್ತಿಗಳಾಗಿರುತ್ತವೆ. ಜೊತೆಗೆ, ಉದ್ಯೋಗಿಗಳ ಕರ್ತವ್ಯ ನಿಷ್ಠೆ, ಸಮಯಪಾಲನೆ, ಬದ್ಧತೆ, ವಿಶ್ವಾಸ, ಪ್ರಾಮಾಣಿಕತೆಯಂತ ಮೌಲ್ಯಗಳು ಸಹ ಅಗತ್ಯವಿರುತ್ತವೆ. ಉದ್ಯೋಗಕ್ಕೆ ತೆಗೆದುಕೊಂಡಾಗ ಇವೆಲ್ಲವೂ ಇರುವುದಿಲ್ಲ. ಆದರೆ, ಸರಿಯಾದ ಶಿಕ್ಷಣ ಮತ್ತು ತರಬೇತಿಯಿಂದ ಸಾಧ್ಯವಾಗುತ್ತದೆ. ಉದ್ಯೋಗಿಗಳಿಗೆ ರಚನಾತ್ಮಕವಾಗಿ ವಿನಿಯೋಗಿಸಿದಷ್ಟು ಸಂಸ್ಥೆಯ ಉತ್ಪಾದಕತೆ ಮತ್ತು ಯಶಸ್ಸು ಹೆಚ್ಚುತ್ತದೆ. ಮಾನವ ಬಂಡವಾಳವು ಗೋಚರಿಸದ ಆಸ್ತಿಯಗಿದ್ದು, ಸಂಸ್ಥೆಯ ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ಸೇರಿಸಲಾಗದು. ಆದರೆ, ಇದು ಆರ್ಥಿಕ ಅಭಿವೃದ್ಧಿಗೆ ಹೊಂದಿರುವ ಸಂಬಂಧವನ್ನು ಸ್ಪಷ್ಟವಾಗಿ ಗ್ರಹಿಸಬಹುದು.

ಸಾಮಾನ್ಯವಾಗಿ ಒಂದು ಸಂಸ್ಥೆಯ ಮಾನವ ಶಕ್ತಿಗೆ (Manpower) ಸಂಬಂಧಿಸಿದ ವಿಷಯಗಳನ್ನು 'ಮಾನವ ಸಂಪನ್ಮೂಲ' (Human Resource - HR) ವಿಭಾಗವು ನೋಡಿಕೊಳ್ಳುತ್ತದೆ. ನೇಮಕಾತಿ, ಶಿಕ್ಷಣ ಮತ್ತು ತರಬೇತಿ ಸರಿಯಾದ ವ್ಯಕ್ತಿಯನ್ನು ಸರಿಯಾದ ಜಾಗಕ್ಕೆ ನೇಮಿಸುವುದು, ವೇತನ ಮತ್ತು ಭತ್ಯೆಗಳು, ಪರಿಹಾರ ನೀಡುವುದು, ಸಮಸ್ಯೆಗಳನ್ನು ಪರಿಹರಿಸುವುದು, ಕಾನೂನಿಗೆ ಸಂಬಂಧಿಸಿದ

ವಿಷಯಗಳು, ಇತ್ಯಾದಿ ಸಂಬಂಧಿತ ಕಾರ್ಯಗಳನ್ನು ನಿರ್ವಹಿಸುವುದಕ್ಕೆ 'ಮಾನವ ಸಂಪನ್ಮೂಲ ವ್ಯವಸ್ಥಾಪನೆ' (Human Resource Management - HRM) ಎಂದು ಕರೆಯಲಾಗುತ್ತದೆ. ಸಂಸ್ಥೆಯ ಗುರಿ ಸಾಧನೆಗೆ ಯಾವ ರೀತಿಯ ಮಾನವ ಸಂಪನ್ಮೂಲ ಅಗತ್ಯವಿದೆ. ಪಡೆಯುವುದು ಹೇಗೆ, ಉಪಯೋಗ ಮಾಡಿಕೊಳ್ಳುವುದು ಹೇಗೆ ಹಾಗೂ ಇದನ್ನೆಲ್ಲಾ ನಿರ್ವಹಿಸುವುದು ಹೇಗೆ ಎಂಬಿತ್ಯಾದಿ ಆಚರಣೆಗಳು ಮಾನವ ಸಂಪನ್ಮೂಲ ವ್ಯವಸ್ಥಾಪನೆಯ ವ್ಯಾಪ್ತಿಗೆ ಬರುತ್ತವೆ.

ಸಂಸ್ಥೆಯ ಗುರಿ ಸಾಧನೆಗೆ ಅಗತ್ಯವಿರುವಂತ ಉದ್ಯೋಗಿಗಳ ಕೌಶಲ್ಯ, ಜ್ಞಾನ, ಸಾಮರ್ಥ್ಯ, ದಕ್ಷತೆಯನ್ನು ಶಿಕ್ಷಣ, ತರಬೇತಿ, ಕಾರ್ಯಾಗಾರ, ಸಮ್ಮೇಳನ ಮುಂತಾದ ವಿಧಾನಗಳ ಮೂಲಕ ಅಭಿವೃದ್ಧಿಗೊಳಿಸುವುದು 'ಮಾನವ ಸಂಪನ್ಮೂಲ ಅಭಿವೃದ್ಧಿ' (Human Resource Development - HRD)ಯ ಕಾರ್ಯವಾಗಿದ್ದು, ಇದು HRMನ ಒಂದು ವಿಭಾಗವಾಗಿರುತ್ತದೆ. ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದಲ್ಲಿರುವ ನಿಪುಣರು ಸಂಬಂಧಿಸಿದ ಕಾರ್ಯಗಳನ್ನು ವ್ಯವಸ್ಥಾನುಸಾರವಾಗಿ ನಿರ್ವಹಿಸುತ್ತಾರೆ. ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಅಭಿವೃದ್ಧಿಯ ವಿಷಯವು ಕಳೆದ ಕೆಲವು ದಶಕಗಳಿಂದ ಹೆಚ್ಚಿನ ಪ್ರಾಧಾನ್ಯತೆಯನ್ನು ಪಡೆದಿರುವುದರ ಜೊತೆಗೆ, ಬೆಳವಣಿಗೆಯನ್ನು ಹೊಂದುತ್ತಿದೆ.

ಸಹಕಾರ ಕ್ಷೇತ್ರವು ಬೃಹತ್ ಆಗಿ ಬೆಳೆದಿದೆ. ರಾಜ್ಯದಲ್ಲಿ ಸುಮಾರು 46,000 ಹಾಗೂ ದೇಶದಲ್ಲಿ ಸುಮಾರು 8.5 ಲಕ್ಷ ಸಹಕಾರ ಸಂಘಗಳಿವೆ. ಗ್ರಾಮ ಮಟ್ಟದಿಂದ ರಾಷ್ಟ್ರಮಟ್ಟದ ವರೆಗೆ ಭಿನ್ನ ಕಾರ್ಯ ವ್ಯಾಪ್ತಿವುಳ್ಳ ಪ್ರಾಥಮಿಕ, ಮಾಧ್ಯಮಿಕ, ಒಕ್ಕೂಟ ಸಂಸ್ಥೆಗಳಿವೆ. ಸಹಕಾರ ಕ್ಷೇತ್ರವು ಲಕ್ಷಾಂತರ ನೌಕರರು, ಲಕ್ಷಾಂತರ ಸಮಿತಿ ಸದಸ್ಯರು ಹಾಗೂ 30 ಕೋಟಿಗೂ ಅಧಿಕ ಸದಸ್ಯರನ್ನು ಒಳಗೊಂಡಿದೆ. ಇಂತಹ ಬೃಹತ್ ಮಾನವಶಕ್ತಿ ಹಾಗೂ ಆರ್ಥಿಕ ಶಕ್ತಿಯನ್ನು ಹೊಂದಿರುವ ಸಹಕಾರ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲ ವ್ಯವಸ್ಥಾಪನೆ ಮತ್ತು ಅಭಿವೃದ್ಧಿ ಹೇಗಿದೆ? ಇಂದಿನ ಮಾರುಕಟ್ಟೆ ಆರ್ಥಿಕ ವ್ಯವಸ್ಥೆಯಲ್ಲಿನ ಸವಾಲುಗಳನ್ನು ಎದುರಿಸಲು ಸಮಗ್ರವಾದ ಮಾನವ ಸಂಪನ್ಮೂಲ ಯೋಜನೆ ಮತ್ತು ಗುರಿ ಇದೆಯೇ? ಸಹಕಾರ ಮಾನವ ಶಕ್ತಿಯ ನಿರ್ಮಾಣದ ದಿಕ್ಕು ಹೇಗೆ ಸಾಗಿದೆ? ಎಂಬಿತ್ಯಾದಿ ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತವೆ. ಈ ಪ್ರಶ್ನೆಗಳ ಬಗ್ಗೆ ಸೂಕ್ಷ್ಮವಾಗಿ ವಾಸ್ತವಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಸಹಕಾರದಲ್ಲಿ, ಸಾಮಾನ್ಯವಾಗಿ ಮಾನವ ಬಂಡವಾಳಕ್ಕೆ ಮಹತ್ವದ ಸ್ಥಾನವನ್ನು ನೀಡಿರುವುದು ಕಂಡು ಬರುವುದಿಲ್ಲ. ಹೆಚ್ಚಿನ ಪ್ರಕರಣಗಳಲ್ಲಿ ಯೋಜನಾರಹಿತ ನಡೆ, ನಿರ್ಲಕ್ಷ್ಯತನ ಮತ್ತು ಅಜ್ಞಾನವನ್ನು ಗುರ್ತಿಸಬಹುದು. ದೊಡ್ಡ ಸಂಸ್ಥೆಗಳು ಮತ್ತು ಒಕ್ಕೂಟಗಳು ತಮ್ಮ ಉದ್ಯೋಗಿಗಳ ಮತ್ತು ಸಮಿತಿಯ ಮಾನವ ಸಂಪನ್ಮೂಲ ಅಭಿವೃದ್ಧಿಯ ಜೊತೆಗೆ ಸದಸ್ಯ ಸಂಘಗಳ ಅಭಿವೃದ್ಧಿಯ ಕಡೆಗೂ ಗಮನ ನೀಡಬೇಕಾಗಿದೆ.

ಒಟ್ಟು ಸಂಘಗಳ ಪೈಕಿ ಸುಮಾರು ಶೇ. 74 ರಷ್ಟು ಪ್ರಾಥಮಿಕ ಮತ್ತು ಮಾಧ್ಯಮಿಕ ಸಂಘಗಳಿದ್ದು, ಇವುಗಳಲ್ಲಿರುವ ಸಿಬ್ಬಂದಿ ಸಂಖ್ಯೆಯು ಕಡಿಮೆ ಇರುತ್ತದೆ. ಹೀಗಾಗಿ, ಈ ಸಂಸ್ಥೆಗಳು ತಮ್ಮದೇ ಆದ ಪರಿಣಾಮಕಾರಿಯಾದ ಮಾನವ ಸಂಪನ್ಮೂಲ ಅಭಿವೃದ್ಧಿ ಯೋಜನೆಯನ್ನು ರೂಪಿಸಿಕೊಳ್ಳುವುದು ಕಷ್ಟವಾಗುವುದರಿಂದ, ರಾಜ್ಯ ಸಹಕಾರ ಮಹಾಮಂಡಳ ಮತ್ತು ಓಅಅಖ ಯ ಜೊತೆಗೆ, ಸಂಬಂಧಿಸಿದ ಒಕ್ಕೂಟಗಳು ತಮ್ಮ ಉತ್ತರದಾಯಿತ್ವವನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಕೆಳಹಂತದ ಸಂಸ್ಥೆಗಳ ಪ್ರಗತಿ ಮತ್ತು ಗುಣಮಟ್ಟ ಹೆಚ್ಚಿದಾಗ ಸಹಜವಾಗಿ ಮೇಲಿನ ಹಂತದ ಸಂಸ್ಥೆಗಳ ಆರ್ಥಿಕ ಮೌಲ್ಯ, ಸದೃಢತೆ ಮತ್ತು ವಿಸ್ತಾರವು ಹೆಚ್ಚುತ್ತದೆ. ಹೆಚ್ಚಿನ ಉದ್ಯೋಗಿಗಳನ್ನು ಹೊಂದಿರುವ ಸಕ್ಕರೆ ಕಾರ್ಖಾನೆಗಳು, ಪತ್ತಿನ ಸಂಘಗಳು, ಜಿಲ್ಲಾ ಕೇಂದ್ರ ಮತ್ತು ಅಪೆಕ್ಸ್ ಬ್ಯಾಂಕ್‌ಗಳು, ಸಹಕಾರ ಹೈನುಗಾರಿಕೆ ಒಕ್ಕೂಟಗಳು, ರಾಜ್ಯ ಸಹಕಾರ ಮಹಾಮಂಡಳ, ಮಾರಾಟ ಮಹಾಮಂಡಳ, ಇತ್ಯಾದಿ ಸಂಸ್ಥೆಗಳು ಮಾನವ ಸಂಪನ್ಮೂಲ ಅಭಿವೃದ್ಧಿಯ ಬಗ್ಗೆ ರಚನಾತ್ಮಕ ಯೋಜನೆ ಮತ್ತು ಹಣ ಹೂಡಿಕೆಯ ಅಗತ್ಯವಿರುತ್ತದೆ. ಸಹಕಾರದಲ್ಲಿ 'ಸಮಿತಿ ಮಾನವ ಬಂಡವಾಳ' (Board Human Capital) ಅಷ್ಟೇ ಪ್ರಾಮುಖ್ಯತೆಯಿಂದ ಕೂಡಿರುತ್ತದೆ. ಸಂಘದಲ್ಲಿ ಆಡಳಿತ ಮತ್ತು ನಿರ್ಣಯ ಕೈಗೊಳ್ಳುವ ಅಧಿಕಾರವುಳ್ಳ ಸಮಿತಿ ಸದಸ್ಯರ ಜ್ಞಾನ, ಕೌಶಲ್ಯ, ಸಾಮರ್ಥ್ಯ, ದಕ್ಷತೆ ಹೆಚ್ಚಿದಷ್ಟು ಸಂಘಗಳ ಕಾರ್ಯನಿರ್ವಹಣೆಯು ಸುಧಾರಿಸುತ್ತದೆ. ಅಲ್ಲದೆ, ಸಮಿತಿಯು ಸಾಮಾನ್ಯ ಸದಸ್ಯರು ಮತ್ತು ಸಮಾಜದೊಡನೆ ಜೋಡಣೆ ಹಾಗೂ ಪ್ರಭಾವ ಉಳ್ಳವರಾದ್ದರಿಂದ, ಅವರುಗಳು ಸಮಗ್ರತೆಯಿಂದ ಜವಾಬ್ದಾರಿಯನ್ನು ನಿರ್ವಹಿಸಿದಾಗ ಸಂಸ್ಥೆಗಳಲ್ಲಿ ಶಿಸ್ತು ಮತ್ತು ಆರ್ಥಿಕ ಪ್ರಗತಿ ಹೆಚ್ಚುತ್ತದೆ.

ಸಂಸ್ಥೆಗಳ ಮಾನವ ಸಂಪನ್ಮೂಲಗಳ ಅಭಿವೃದ್ಧಿಯಲ್ಲಿ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಹಾಗೂ ತರಬೇತುದಾರರ ಪಾತ್ರವು ಮುಖ್ಯವಾಗಿರುತ್ತದೆ. ಇಂದಿನ ಆಧುನಿಕ ಯುಗದಲ್ಲಿ ಪರಿಣಾಮ ಉಂಟು ಮಾಡುವಂತ ಪರಿಸರ ಮತ್ತು ಮೂಲಭೂತ ಸೌಕರ್ಯಗಳ ಅಗತ್ಯವಿರುತ್ತದೆ. ತರಬೇತುದಾರರಲ್ಲಿ ಪ್ರೇರಣೆ ನೀಡುವಂತ ಕೌಶಲ್ಯ, ಜ್ಞಾನ, ಸಮರ್ಪಣೆ ಮತ್ತು ಕಠಿಣ ಪರಿಶ್ರಮವು ಹೆಚ್ಚಾಗಿ ಬೇಕಾಗುತ್ತದೆ. ಇದರ ಅಭಾವ ಉಂಟಾದರೆ ಅಥವಾ ಗಂಭೀರತೆ ಇಲ್ಲದಿದ್ದರೆ ಅಥವಾ ವಾರ್ಷಿಕ ಕಾರ್ಯಕ್ರಮಗಳ ಗುರಿ ಸಾಧನೆಗಷ್ಟೇ ಕೇಂದ್ರಿಕರಿಸಿದರೆ ನಿಜವಾದ ಫಲಿತಾಂಶವು ಅನುತ್ಪಾದಕವಾಗುತ್ತದೆ. ಈ ವಿಷಯಗಳಲ್ಲಿ ಇಲಾಖೆಯು ಅಸಡ್ಡೆ ವಹಿಸಿದರೆ ಸಹಕಾರದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಯು ಹಿನ್ನಡೆಯಾಗುತ್ತದೆ.

ಸಹಕಾರದಲ್ಲಿ ಸರಿಯಾದ ಮಾನವ ಸಂಪನ್ಮೂಲ ಯೋಜನೆ ಮತ್ತು ವ್ಯವಸ್ಥಾಪನೆ ಹಾಗೂ ಅಭಿವೃದ್ಧಿ ಇಲ್ಲದಿದ್ದರೆ ಅದರ ಪರಿಣಾಮದಿಂದ ಬೆಳವಣಿಗೆಯು ಕುಗ್ಗುತ್ತದೆ ಮತ್ತು ಗುಣಮಟ್ಟ ಕೆಡುತ್ತದೆ. ಅರ್ಧ ಜ್ಞಾನದಿಂದ ಹಾನಿ ಹೆಚ್ಚುತ್ತದೆ. ಉದ್ಯೋಗಿಗಳ ಕೊರತೆ ಅಥವಾ ಅಗತ್ಯಕ್ಕಿಂತ ಹೆಚ್ಚು ಅಥವಾ ಬಳಕೆ ಆಗದಿದ್ದರೆ – ಇದೆಲ್ಲದರ ಪರಿಣಾಮವು ಸಂಸ್ಥೆಯ ಭವಿಷ್ಯಕ್ಕೆ ಅಪಾಯ ಉಂಟು ಮಾಡುತ್ತದೆ. ಆದುದ್ದರಿಂದ, ಮಾನವ ಬಂಡವಾಳಕ್ಕೆ ಆದ್ಯತೆ ನೀಡುವುದರಿಂದ ಆರ್ಥಿಕ ಉತ್ಪಾದಕತೆಯು ಹೆಚ್ಚಿ ಲಾಭದಾಯಕ ಮುನ್ನಡೆ ಸಾಧ್ಯವಾಗುತ್ತದೆ.

*The only waste of Human resources is letting them go unsed.*

*- Mark Victor Hanson*



# ಜೂನ್ 1, ವಿಶ್ವ ಹಾಲು ದಿನಾಚರಣೆ
## ಹೈನೋದ್ಯಮ - ಆರೋಗ್ಯ ಭಾಗ್ಯಕ್ಕೆ ಹೆಬ್ಬಾಗಿಲು

▸▸ ಕೆ.ಎಸ್. ರಂಗೇಗೌಡ, ಹಿರಿಯ ಉಪ ನಿರ್ದೇಶಕರು (ನಿ), ಕರ್ನಾಟಕ ಹಾಲು ಮಹಾಮಂಡಳಿ

ಪ್ರತಿವರ್ಷ ಜೂನ್ 1 ರಂದು 'ವಿಶ್ವ ಹಾಲು ದಿನಾಚರಣೆ' ಯನ್ನು 2001 ರಿಂದಲೂ ವಿಶ್ವದಾದ್ಯಂತ ಆಚರಿಸಿಕೊಂಡು ಬರಲಾಗುತ್ತಿದೆ. ಜಾಗತಿಕ ಆಹಾರವೆಂದು ಪರಿಗಣಿಸಲ್ಪಟ್ಟಿರುವ ಹಾಲಿನ ಮಹತ್ವವನ್ನು ಜಗತ್ತಿಗೆ ಪರಿಚಯಿಸುವ ಉದ್ದೇಶದಿಂದ ವಿಶ್ವಸಂಸ್ಥೆಯ ಅಂಗ ಸಂಸ್ಥೆಯಾಗಿರುವ 'ಆಹಾರ ಮತ್ತು ಕೃಷಿ ಸಂಸ್ಥೆ (Food and Agriculture Organisation) ಪ್ರತಿವರ್ಷವೂ ಒಂದೊಂದು ವಿಶಿಷ್ಟ ಧ್ಯೇಯದೊಂದಿಗೆ ಹಾಲು ದಿನವನ್ನು ಆಚರಿಸಿಕೊಂಡು ಬರುತ್ತಿದೆ. ಹಾಗೆಯೇ ಈ ವರ್ಷದ ಧ್ಯೇಯ ಘೋಷ : `Celebrating the Vital role dairy plays in delivering quality nutrition to nourish the world'

**ಹಾಲಿನ ಮಹತ್ವ :** ಹಾಲು ಭೂಮಿಯ ಮೇಲೆ ನೈಸರ್ಗಿಕವಾಗಿ ಲಭ್ಯವಿರುವ ಅಮೃತವೆಂದೇ ಕರೆಯಲ್ಪಡುತ್ತದೆ. ಈ ಭೂಮಿಯ ಮೇಲೆ ಜನ್ಮತಳೆಯುವ ಬಹಳಷ್ಟು ಜೀವಿಗಳು ತಮ್ಮ ತಾಯಿ ಹಾಲಿನ ಸೇವನೆಯೊಂದಿಗೆ ಜೀವನ ಆರಂಭಿಸುತ್ತವೆ. ಹಾಗೂ ಹಾಲಿನಲ್ಲಿನರುವ ಪೌಷ್ಟಿಕಾಂಶಗಳಿಂದಾಗಿ ಎಲ್ಲಾ ಆಹಾರ ಪದಾರ್ಥಗಳ ಪೈಕಿ ಹಾಲು ಅಗ್ರಸ್ಥಾನವನ್ನು ಪಡೆದುಕೊಂಡಿದೆ. ಹಾಲು ಕೇವಲ ಆಹಾರ ಪದಾರ್ಥ ಮಾತ್ರವಾಗಿರದೆ, ಮಾನವನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಅವಶ್ಯವಿರುವ 18ಕ್ಕೂ ಅಧಿಕ ಪೋಷಕಾಂಶಗಳನ್ನು ಹೊಂದಿದೆಯಾದ್ದರಿಂದ ಹಾಲು ಪರಿಪೂರ್ಣ ಆಹಾರವೆಂದು ಪರಿಗಣಿಸಲ್ಪಟ್ಟಿದೆ. ಹಾಗಾಗಿಯೇ ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆ (ICMR) ಪ್ರತಿಯೊಬ್ಬರೂ ನಿತ್ಯ ಕನಿಷ್ಟ 310 ಮಿ.ಲೀ. ಹಾಲು ಸೇವನೆ ಅವಶ್ಯವೆಂದು ಶಿಫಾರಸ್ಸು ಮಾಡಿರುತ್ತದೆ.

ಹಾಲಿನಲ್ಲಿ ನೈಸರ್ಗಿಕವಾಗಿ ಲಭ್ಯವಿರುವ ಪ್ರೋಟೀನು, ಲ್ಯಾಕ್ಟೋಸ್, ಖನಿಜಾಂಶಗಳು, ಕೊಬ್ಬು ಹಾಗೂ ಸಮೃದ್ಧ ಪೋಷಕಾಂಶಗಳಿವೆ. 100 ಮಿ.ಲೀ. ಹಾಲಿನಲ್ಲಿ ಕಾರ್ಬೋಹೈಡ್ರೇಟ್ 4.8 ಗ್ರಾಂ, ಲ್ಯಾಕ್ಟೋಸ್ 4.8 ಗ್ರಾಂ, ಸಾಚುರೇಟೆಡ್ ಕೊಬ್ಬಿನಾಂಶ 3 ಗ್ರಾಂ, ಪ್ರೋಟೀನು 3.3 ಗ್ರಾಂ, ಖನಿಜಾಂಶಗಳು 0.7 ಗ್ರಾಂ, ಕ್ಯಾಲ್ಸಿಯಂ 124 ಮಿ.ಗ್ರಾಂ, ವಿಟಮಿನ್ 'ಎ' 27 ಮೈಕ್ರೋ ಗ್ರಾಂ, ವಿಟಮಿನ್ 'ಡಿ' 0.5 ಮೈಕ್ರೋಗ್ರಾಂ ಅಡಕವಾಗಿದ್ದು, 74 ಕಿಲೋ ಕ್ಯಾಲರಿಯಷ್ಟು ಶಕ್ತಿಯನ್ನು ಹೊಂದಿರುತ್ತದೆ.

ಹಾಲಿನಲ್ಲಿರುವ ಪ್ರೋಟೀನು ಮೆದುಳು ಮತ್ತು ನರಮಂಡಲಕ್ಕೆ ಉಂಟಾಗುವ ಹಾನಿಯನ್ನು ತಡೆಗಟ್ಟುವುದಲ್ಲದೆ, ಕೂದಲು ಮತ್ತು




ತ್ವಚೆಯ ಆರೋಗ್ಯವನ್ನು ಸಂರಕ್ಷಿಸುತ್ತದೆ. ಕಾರ್ಬೋಹೈಡ್ರೇಟ್ಸ್ ಕ್ಯಾಲ್ಸಿಯಂನೊಂದಿಗೆ ಬೆರೆತು ಕ್ಯಾಲ್ಸಿಯಾ ಲ್ಯಾಕ್ಟೋಸ್ ಆಗಿ ಮೆದುಳಿನ ಬೆಳವಣಿಗೆಗೆ ಸಹಕಾರಿಯಾಗುತ್ತಾ ದೇಹಕ್ಕೆ ಶಕ್ತಿಯನ್ನು ಒದಗಿಸುತ್ತದೆ. ಹಾಲಿನಲ್ಲಿನ ಕೊಬ್ಬಿನಾಂಶವು ಹೃದಯ ಮತ್ತು ಮೆದುಳಿನ ಆರೋಗ್ಯಕ್ಕೆ ಉಪಯುಕ್ತವಾಗಿದ್ದು, ಕ್ಯಾನ್ಸರ್ ತಡೆಗಟ್ಟುವಲ್ಲಿಯೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ. ವಿಟಮಿನ್‌ಗಳಾದ ಎ1, ಬಿ1, ಬಿ2, ಬಿ3, ಬಿ12 ಹಾಗೂ ವಿಟಮಿನ್ 'ಡಿ' ಕಣ್ಣು, ಮೆದುಳು, ಮೂಳೆಗಳ ಬೆಳವಣಿಗೆ, ಕೆಂಪು ರಕ್ತಕಣಗಳ ಉತ್ಪತ್ತಿ ಹೀಗೆ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇವುಗಳೊಂದಿಗೆ ಲವಣಾಂಶಗಳಾದ ರಂಜಕ, ಕ್ಯಾಲ್ಸಿಯಂಗಳು ಮೆದುಳು, ನರಕೋಶಗಳನ್ನು ಸದೃಢಗೊಳಿಸುವುದಲ್ಲದೆ ಹಲ್ಲು ಮತ್ತು ಎಲುಬುಗಳನ್ನು ಬಲಿಷ್ಠಗೊಳಿಸುವಲ್ಲಿ ಸಹಕಾರಿಯಾಗಿವೆ.

ಹೀಗೆ ಎಲ್ಲಾ ವಯೋಮಾನದವರಿಗೂ ಅಗತ್ಯವಿರುವ ಮತ್ತು ಸುಲಭವಾಗಿ ಜೀರ್ಣವಾಗುವ ಸಮತೋಲಿತ ಆಹಾರಾಂಶಗಳು ಹಾಲಿನಲ್ಲಿ ಸಮೃದ್ಧವಾಗಿರುವುದರಿಂದಾಗಿ ಹಾಲನ್ನು ಸಮತೋಲಿತ ಸಂಪೂರ್ಣ ಆಹಾರವೆಂದು ಹೇಳಬಹುದು. ಅದರಿಂದಾಗಿಯೇ ಹಾಲು ಮತ್ತದರಿಂದ ತಯಾರಾಗುವ ಮೌಲ್ಯವರ್ಧಿತ ಉತ್ಪನ್ನಗಳು ಇಂದು ವಿಶ್ವದ ಪ್ರತಿಯೋರ್ವರ ನಿತ್ಯಾಹಾರವೂ ಆಗಿವೆ.

**ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆ (FAO) :** ಪ್ರತಿವರ್ಷ ಜಗತ್ತಿನಾದ್ಯಂತ 'ವಿಶ್ವ ಹಾಲು ದಿನಾಚರಣೆ' ಆಯೋಜನೆಯ ಹೊಣೆಯನ್ನು ಆಹಾರ ಮತ್ತು ಕೃಷಿ ಸಂಸ್ಥೆ ನಿರ್ವಹಿಸುತ್ತದೆ. ವಿಶ್ವ ಸಂಸ್ಥೆಯ ವಿಶಿಷ್ಟ ಘಟಕವಾಗಿ ಕಾರ್ಯನಿರ್ವಹಿಸುತ್ತಿರುವ ಈ ಸಂಸ್ಥೆ 1945 ರಲ್ಲಿ ಸ್ಥಾಪನೆಗೊಂಡಿದ್ದು

ಇದರ ಕೇಂದ್ರ ಸ್ಥಾನ ಇಟಲಿಯ ರೋಮ್ ನಗರದಲ್ಲಿದೆ. ಪ್ರಮುಖ ಪಿಡುಗಾಗಿ ವಿಶ್ವವನ್ನು ಕಾಡುತ್ತಿರುವ ಹಸಿವನ್ನು ನಿರ್ಮೂಲನೆ ಮಾಡುವ ಗುರಿಯೊಂದಿಗೆ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಅಗತ್ಯವಿರುವ ಪೌಷ್ಠಿಕ ಆಹಾರ ಸೇವನೆಗೆ ಯೋಜನೆ ರೂಪಿಸುವುದು ಹಾಗೂ ಆ ಮೂಲಕ ಆಹಾರ ಭದ್ರತೆಯನ್ನು ವಿಶ್ವ ಸಮುದಾಯಕ್ಕೆ ಒದಗಿಸುವ ಮಹದುದ್ದೇಶವನ್ನು ಈ ಸಂಸ್ಥೆ ಹೊಂದಿದೆ. ಪ್ರಸ್ತುತ 194 ಸದಸ್ಯ ರಾಷ್ಟ್ರಗಳನ್ನೊಳಗೊಂಡ ಬೃಹತ್ ಸಂಸ್ಥೆಯಾಗಿರುವ ಎಫ್ಎಓ ನಲ್ಲಿ ಭಾರತವನ್ನು ಒಳಗೊಂಡಂತೆ 130ಕ್ಕೂ ಹೆಚ್ಚು ರಾಷ್ಟ್ರಗಳು ಕೃಷಿ ಮತ್ತು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿವೆ. ಈ ಸದಸ್ಯ ರಾಷ್ಟ್ರಗಳು ಮನುಷ್ಯನ ಹಸಿವನ್ನು ನೀಗಿಸುವುದರೊಂದಿಗೆ ಉತ್ತಮ ಗುಣಮಟ್ಟದ ಆಹಾರ ಪದಾರ್ಥಗಳನ್ನು ಉತ್ಪಾದಿಸಿ ಸರಬರಾಜು ಮಾಡಬೇಕೆಂಬುದು ಈ ಸಂಸ್ಥೆಯ ನಿರೀಕ್ಷೆಯಾಗಿದೆ. ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಕಾರ ಆಹಾರವೆಂದರೆ ಮನುಷ್ಯನ ಕಾರ್ಯಚಟುವಟಿಕೆ ಮತ್ತು ಆರೋಗ್ಯಪೂರ್ಣ ಜೀವನಕ್ಕೆ ಅವಶ್ಯವಿರುವ ಸುರಕ್ಷಿತ ಮತ್ತು ಪೌಷ್ಠಿಕಾಂಶಭರಿತ ಪದಾರ್ಥಗಳಾಗಿವೆ. ದೇಶೀಯ ಉತ್ಪಾದನೆ ಹಾಗೂ ಆಮದು ಮೂಲಕ ವಿಶ್ವದ ಪ್ರತಿಯೊಬ್ಬರಿಗೂ ಅಗತ್ಯವಿರುವಷ್ಟು ಪ್ರಮಾಣದ ಪೌಷ್ಠಿಕ ಆಹಾರ ಲಭ್ಯವಾಗುವಂತೆ ನೋಡಿಕೊಳ್ಳುವುದು ಎಫ್ಎಓ ನ ಉದ್ದೇಶಗಳಲ್ಲೊಂದಾಗಿದೆ.

**ಈ ವರ್ಷದ 'ವಿಶ್ವ ಹಾಲು ದಿನಾಚರಣೆ' ಯ ಧ್ಯೇಯ ಘೋಷ :** ವಿಶ್ವ ಹಾಲು ದಿನಾಚರಣೆಯ ಮುಖ್ಯ ಉದ್ದೇಶ ಹಾಲನ್ನು 'ಜಾಗತಿಕ ಆಹಾರ'ವಾಗಿ ವಿಶ್ವಕ್ಕೆ ಪರಿಚಯಿಸುವುದು ಮತ್ತು ಹೈನೋದ್ಯಮದ ಕಾರ್ಯಚಟುವಟಿಕೆ ಸಾಧನಗಳನ್ನು ಪ್ರಚಾರಪಡಿಸುವುದರೊಂದಿಗೆ ಪ್ರೋತ್ಸಾಹಿಸುವುದಾಗಿದೆ. ಆಹಾರ ಮತ್ತು ಕೃಷಿ ಸಂಸ್ಥೆಯ ಇಂತಹ ಪ್ರೇರಣಪೂರ್ವಕ ಉಪಕ್ರಮಗಳಿಂದಾಗಿ ಇಂದು ವಿಶ್ವದಾದ್ಯಂತ 100 ಕೋಟಿಗೂ ಅಧಿಕ ರೈತ ಕುಟುಂಬಗಳು ಹೈನುಗಾರಿಕೆಯಲ್ಲಿ ತೊಡಗಿಕೊಂಡು ಗುಣಮಟ್ಟದ ಹಾಲು ಉತ್ಪಾದನೆಯೊಂದಿಗೆ ಅವರ ಜೀವನ ಸುಧಾರಣೆಗೂ ಸಹಕಾರಿಯಾಗಿರುತ್ತದೆ.

ಪ್ರತಿ ವರ್ಷವೂ ಒಂದು ವಿಶಿಷ್ಟ ಥೀಮ್‌ನೊಂದಿಗೆ 'ವಿಶ್ವ ಹಾಲು ದಿನ'ವನ್ನು ಅರ್ಥಪೂರ್ಣವಾಗಿ ಆಚರಿಸುತ್ತಾ ಬರಲಾಗುತ್ತಿದ್ದು ಈ ವರ್ಷದ ಧ್ಯೇಯ ಘೋಷ 'Celebrating the vital role dairy plays in delivering quality nutrition to nourish the World' ಆಗಿರುತ್ತದೆ.

ವಿಶ್ವ ಸಮುದಾಯಕ್ಕೆ ಅಗತ್ಯವಿರುವ ಹಾಲಿನ ತೀವ್ರ ಕೊರತೆ ಹಿಂದಿನ ಶತಮಾನಗಳಲ್ಲಿ ಸಾಮಾನ್ಯವಾಗಿತ್ತು. ಅದರಲ್ಲಿಯೂ ಬಡ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಹಾಲು ಮತ್ತು ಪೌಷ್ಟಿಕಾಂಶಯುಕ್ತ ಆಹಾರದ ಕೊರತೆಯನ್ನು ಎದುರಿಸುತ್ತಿದ್ದವು. ಆದರೆ, ಕಳೆದ ನಾಲ್ಕೈದು ದಶಕಗಳಿಂದೀಚೆಗೆ ಹಾಲಿನ ಉತ್ಪಾದನೆಯು ಗಣನೀಯವಾಗಿ ಹೆಚ್ಚಾಗುತ್ತಿದೆ. ಇದರಲ್ಲಿ ವಿಶ್ವ ಡೇರಿ ಉದ್ಯಮವು ಮಹತ್ತರ ಕೊಡುಗೆಯನ್ನು ನೀಡುತ್ತಾ ಬಂದಿರುವುದನ್ನು ಕಾಣಬಹುದು. ಗುಣಮಟ್ಟದ ಹಾಲು ಉತ್ಪಾದನೆಗೆ ಉತ್ತೇಜನ ನೀಡುವುದು ಒಂದು ಕಡೆಯಾದರೆ ಗ್ರಾಹಕರ ಅಭಿರುಚಿ ಮತ್ತು ಅಗತ್ಯತೆಗನುಗುಣವಾಗಿ ಉತ್ಕೃಷ್ಟ ಗುಣಮಟ್ಟದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸರಬರಾಜು ಮಾಡುವಲ್ಲಿ ವಿಶ್ವ ಹೈನೋದ್ಯಮವು ಮಹತ್ತರ ಪಾತ್ರ ವಹಿಸಿದ್ದರಿಂದಾಗಿ ಈ ಕ್ಷೇತ್ರದಲ್ಲಿ ಸುಸ್ಥಿರ ಬೆಳವಣಿಗೆ ಸಾಧಿಸಿ ಮುನ್ನಡೆಯಲು ಸಾಧ್ಯಾವಾಗಿದೆ.

ಆಹಾರ ಮತ್ತು ಕೃಷಿ ಸಂಸ್ಥೆಯ ನಿರಂತರ ಉತ್ತೇಜಕ ಕಾರ್ಯಕ್ರಮಗಳು ಹಾಗೂ ಸಹಕಾರದೊಂದಿಗೆ ಆಯಾ ದೇಶದಲ್ಲಿನ ಸರ್ಕಾರದ ಪ್ರೋತ್ಸಾಹ ಮತ್ತು ನೆರವಿನಿಂದಾಗಿ ಹೈನೋದ್ಯಮವು ನಿರೀಕ್ಷಿತ ಗುರಿ ಸಾಧಿಸಲು ಸಾಧ್ಯವಾಗಿದೆ. ಹಾಲು ಉತ್ಪಾದಕ ಕೃಷಿ ಸಮುದಾಯವನ್ನು ಪ್ರೋತ್ಸಾಹಿಸುವ ಮೂಲಕ ಗುಣಮಟ್ಟದ ಹಾಲು ಉತ್ಪಾದನೆ ಹಾಗೂ ಹೀಗೆ ಉತ್ಪಾದಿಸಿದ ಹಾಲನ್ನು ಆಧುನಿಕ ತಂತ್ರಜ್ಞಾನದ ನೆರವಿನಿಂದ ಸಂಸ್ಕರಿಸಿ ಉತ್ಕೃಷ್ಟ ಹಾಲು ಮತ್ತಿದರ ಮೌಲ್ಯವರ್ಧಿತ ಉತ್ಪನ್ನಗಳನ್ನು ಸಕಾಲದಲ್ಲಿ ಗ್ರಾಹಕರಿಗೆ ಸರಬರಾಜು ಮಾಡುವಲ್ಲಿ ರೈತರು ಮತ್ತು ಗ್ರಾಹಕರ ನಡುವಿನ ಸುವರ್ಣ ಸೇತುವೆಯಾಗಿ ವಿಶ್ವ ಹೈನೋದ್ಯಮ ಕಾರ್ಯನಿರ್ವಹಿಸುತ್ತಿದೆ. ಇದರಿಂದಾಗಿ ಜಾಗತಿಕ ಆಹಾರವಾಗಿರುವ ಪೌಷ್ಟಿಕಾಂಶಯುಕ್ತ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಅಗತ್ಯವಿರುವಲ್ಲಿಗೆ ಸರಬರಾಜು ಮಾಡುತ್ತಾ ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿಯೂ ನಿರೀಕ್ಷಿತ ಯಶಸ್ಸು ಕಾಣವಂತಾಗಲು 'ವಿಶ್ವ ಹಾಲು ದಿನಾಚರಣೆ'ಯಂತಹ ಕಾರ್ಯಕ್ರಮಗಳು ನೆರವಾಗಲಿವೆ.

ಹಾಗಾಗಿಯೇ ಈ ವರ್ಷ 2024ರ ವಿಶ್ವ ಹಾಲು ದಿನದ ಧ್ಯೆಯ ಘೋಷದೊಂದಿಗೆ #World Milk Day# Enjoy Dairy ಹ್ಯಾಶ್ ಟ್ಯಾಗ್‌ನ್ನು ಅಂತರ್ಜಾಲ ದೃಶ್ಯ ಮಾಧ್ಯಮ ಸೇರಿದಂತೆ ಸಾಮಾಜಿಕ ಜಾಲತಾಣ ಗಳಲ್ಲಿಯೂ ಬಳಸುತ್ತಾ ವಿಶ್ವ ಹಾಲು ದಿನವನ್ನು ಅರ್ಥಪೂರ್ಣವಾಗಿ ಆಚರಿಸಲು ಉದ್ದೇಶಿಸಲಾಗಿದೆ.

**ಭಾರತದಲ್ಲಿ ವಿಶ್ವ ಹಾಲು ದಿನಾಚರಣೆ :** ಕೃಷಿ ಪ್ರಧಾನ ದೇಶವಾಗಿರುವ ಭಾರತದಲ್ಲಿನ ಪಾರಂಪರಿಕ ಹೈನುಗಾರಿಕೆ ವಿಧಾನವೂ ಅರವತ್ತರ ದಶಕದಲ್ಲಾದ ಕ್ಷೀರಕ್ರಾಂತಿಯ ಪರಿಣಾಮವಾಗಿ ಹೈನೋದ್ಯಮ ಸ್ವರೂಪ ಪಡೆದು ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಸ್ವಾತಂತ್ರ ಪೂರ್ವದಲ್ಲಿ ಹಾಲಿನ ಕೊರತೆ ಎದುರಿಸುತ್ತಿದ್ದ ದೇಶವು ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿ ಜಾರಿಗೊಂಡ ಪಂಚವಾರ್ಷಿಕ ಯೋಜನೆ, ಹಸಿರು ಕ್ರಾಂತಿ ಹಾಗೂ ಶ್ವೇತ ಕ್ರಾಂತಿಯ ಫಲವಾಗಿ ಆಹಾರ ಮತ್ತು ಹಾಲಿನ ಉತ್ಪಾದನೆಯಲ್ಲಿ ಭಾರತ ಸ್ವಾವಲಂಬನೆ ಸಾಧಿಸುವಲ್ಲಿ ಯಶಸ್ಸು ಕಂಡಿದೆ.

ಭಾರತ ದೇಶವಿಂದು ವಿಶ್ವದಲ್ಲಿಯೇ ಅತಿ ಹೆಚ್ಚು ಹಾಲು ಉತ್ಪಾದಿಸುತ್ತಿರುವ ಅಗ್ರಮಾನ್ಯ ರಾಷ್ಟ್ರವಾಗಿದ್ದು 2022-23ರಲ್ಲಿ

ಸುಮಾರು 230.58 ಮಿಲಿಯನ್ ಮೆಟ್ರಿಕ್ ಟನ್ ಹಾಲು ಉತ್ಪಾದನೆ ಮಾಡಿ ಶೇ.4ರಷ್ಟು ವಾರ್ಷಿಕ ಬೆಳವಣಿಗೆ ಕಂಡಿದೆ. ಇದರಿಂದಾಗಿ ಪ್ರತಿ ವ್ಯಕ್ತಿಯ ಸರಾಸರಿ ನಿತ್ಯ ಹಾಲಿನ ಲಭ್ಯತೆ 460 ಗ್ರಾಂಗೆ ವೃದ್ಧಿಯಾಗಿದೆ. ಜಾಗತಿಕ ವ್ಯಕ್ತಿಗತ ಲಭ್ಯತೆಯಾಗಿರುವ 322 ಗ್ರಾಂಗೆ ಹೋಲಿಸಿದರೆ ಭಾರತದಲ್ಲಿನ ಪ್ರತಿ ವ್ಯಕ್ತಿಯ ಸರಾಸರಿ ಲಭ್ಯತೆಯು ಗಣನೀಯವಾಗಿ ವೃದ್ಧಿಸುತ್ತಿರುವುದನ್ನು ಇಲ್ಲಿ ಕಾಣಬಹುದು. ಹೈನೋದ್ಯಮದ ಇಂತಹ ಬೆಳವಣಿಗೆಯಿಂದಾಗಿ ಹೈನೋದ್ಯಮದ ಗಾತ್ರವು 16792.1 ಬಿಲಿಯನ್ ದಾಟಿದ್ದು 2024–32ರ ಅವಧಿಯಲ್ಲಿ ಅದು ಶೇ.13 ರಷ್ಟು ಹೆಚ್ಚಳವಾಗಿ 49953.5 ಬಿಲಿಯನ್ ದಾಟುವ ನಿರೀಕ್ಷೆಯನ್ನು ಹೊಂದಲಾಗಿದೆ.

ಭಾರತೀಯ ಹೈನೋದ್ಯಮ ಅಭಿವೃದ್ಧಿಯ ಕೊಡುಗೆಯಲ್ಲಿ ಸಹಕಾರಿ ಹೈನೋದ್ಯಮದ ಸಿಂಹಪಾಲು ಇರುವುದನ್ನು ಕಾಣಬಹುದು. ಅಮೂಲ್ ನಂತರದ ಸ್ಥಾನದಲ್ಲಿರುವ ಕರ್ನಾಟಕ ಹಾಲು ಮಹಾಮಂಡಳವು ಪ್ರಸ್ತುತ ರಾಜ್ಯದಾದ್ಯಂತ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವ 15722 ಗ್ರಾಮಮಟ್ಟದ ಪ್ರಾಥಮಿಕ ಸಹಕಾರಿ ಹಾಲು ಉತ್ಪಾದಕ ಸಂಘಗಳ ಮೂಲಕ ಪ್ರತಿನಿತ್ಯ 82 ಲಕ್ಷ ಲೀಟರ್ ವರೆಗೂ ಅಧಿಕ ಹಾಲನ್ನು ಸಂಗ್ರಹಿಸುತ್ತದೆ. ಕಳೆದೊಂದು ವರ್ಷದಿಂದ ರಾಜ್ಯವನ್ನು ಬೆಂಬಿಡದೆ ಕಾಡಿದ ಬರಗಾಲದಿಂದಾಗಿ ರಾಜ್ಯವು ನೀರು ಮತ್ತು ಜಾನುವಾರುಗಳ ಮೇವಿನ ಕೊರತೆಯನ್ನು ಎದುರಿಸುತ್ತಾ ಬಂದಿದೆ. ಇಂತಹ ಕಷ್ಟದ ಪರಿಸ್ಥಿತಿಯಲ್ಲಿಯೂ ದಿನ ನಿತ್ಯ ಸರಾಸರಿ 80 ಲಕ್ಷ ಲೀಟರ್‌ಗೂ ಅಧಿಕ ಹಾಲನ್ನು ಸಂಗ್ರಹಿಸಿದ ಹೆಗ್ಗಳಿಕೆ ಕರ್ನಾಟಕ ಹಾಲು ಮಹಾಮಂಡಳ ಮತ್ತಿದರ ಒಕ್ಕೂಟಗಳದ್ದು. ಕೆ.ಎಂ.ಎಫ್‌ನ ನಿರಂತರ ನೆರವು ಸಹಕಾರದೊಂದಿಗೆ ರಾಜ್ಯ ಸರಕಾರದ ಪ್ರೋತ್ಸಾಹಧನ ಮತ್ತು ಅನುದಾನಗಳು ಹಾಲು ಉತ್ಪಾದಕರ ನೆರವಿಗೆ ಬಂದಿದೆ. ಬರಗಾಲದ ಕರಿನೆರಳಿನಲ್ಲಿ ಇತರೆ ಕೃಷಿ ಬೆಳೆಗಳು ರೈತ ಸಮುದಾಯದ ಕೈಹಿಡಿಯದಿದ್ದ ಸಂದರ್ಭದಲ್ಲಿ ಹೈನುಗಾರಿಕೆ ಅವರಿಗೆ ನಿಶ್ಚಿತ ಆದಾಯದ ಮೂಲಕ ಆಶಾದಾಯಕ ಕಸುಬಾಗಿ ಕೈಹಿಡಿದಿದೆ.

ರೈತರು ಉತ್ಪಾದಿಸುವ ಹಾಲಿಗೆ ನಿಶ್ಚಿತ ಬೆಲೆ ಮತ್ತು ಆದಾಯದ ಖಾತರಿಯೊಂದಿಗೆ ಅವರು ಉತ್ಪಾದಿಸುವ ಹಾಲನ್ನು ಆಧುನಿಕ ತಂತ್ರಜ್ಞಾನದಿಂದ ಸಂಸ್ಕರಿಸಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು 'ನಂದಿನಿ' ಬ್ರಾಂಡ್‌ನಡಿಯಲ್ಲಿ ಮಾರುಕಟ್ಟೆಗೆ ಒದಗಿಸುವ ಕೆಲಸವನ್ನು ಕರ್ನಾಟಕ ಹಾಲು ಮಹಾಮಂಡಳ ಯಶಸ್ವಿಯಾಗಿ ನಿರ್ವಹಿಸುತ್ತಿದೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ತನ್ನದೇ ಆದ ಮಾರುಕಟ್ಟೆ ಜಾಲವನ್ನು ಹೊಂದಿರುವ 'ನಂದಿನಿ' ಇತ್ತೀಚಿನ ದಿನಮಾನದಲ್ಲಿ ಅಂತಾರಾಷ್ಟ್ರೀಯ ಮಾರುಕಟ್ಟೆಯನ್ನು ಪ್ರವೇಶಿಸಿದೆ. ವಿಶ್ವ ಮಾರುಕಟ್ಟೆಯಲ್ಲಿ ತನ್ನದೇ ಆದ ಪ್ರಮುಖ ಸ್ಥಾನ ಪಡೆದಿರುವ ಯುನೈಟೆಡ್ ಅರಬ್ ಎಮಿರೇಟ್ಸ್‌ನ ದುಬೈ ನಗರದಲ್ಲಿ ಕೆಎಂಎಫ್ ಅಂತಾರಾಷ್ಟ್ರೀಯ ದರ್ಜೆಯ 'ನಂದಿನಿ' ಮಾರುವ ಮಳಿಗೆ ಆರಂಭಿಸಿದೆ.



ವಿಶ್ವವನ್ನು ಅದರಲ್ಲಿಯೂ ಯುವ ಸಮುದಾಯವನ್ನು ಆಕರ್ಷಿಸುತ್ತಿರುವ ಕ್ರಿಕೆಟ್ ಕ್ರೀಡೆಯನ್ನು ಪ್ರೋತ್ಸಾಹಿಸುವುದರ ಮೂಲಕ ತನ್ನ 'ನಂದಿನಿ' ಬ್ರಾಂಡ್‌ನ್ನು ವಿಶ್ವಕ್ಕೆ ಪರಿಚಯಿಸುವ ಪ್ರಯತ್ನದಲ್ಲಿ ಕೆಎಂಎಫ್ ಯಶಸ್ಸನ್ನು ಕಂಡಿದೆ. ಮುಂಬರುವ ವಿಶ್ವಕಪ್ ಟಿ20 ಕ್ರಿಕೆಟ್ ಪಂದ್ಯಾವಳಿಯಲ್ಲಿ ಸ್ಕಾಟ್‌ಲೆಂಡ್ ಮತ್ತು ಐರ್ಲೆಂಡ್ ತಂಡಗಳ ಪ್ರಾಯೋಜಕತ್ವವನ್ನು ಹೊಂದುವ ಮೂಲಕ 'ನಂದಿನಿ' ಬ್ರಾಂಡ್ ಉತ್ಪನ್ನಗಳನ್ನು ಜಾಗತಿಕ ಮಟ್ಟದಲ್ಲಿ ಪರಿಚಯಿಸಿ ತನ್ನ ಮಾರುಕಟ್ಟೆ ವಿಸ್ತರಣೆಗೆ ಕೆಎಂಎಫ್ ಮುಂದಾಗಿದೆ.

ಈ ವರ್ಷದ 'ವಿಶ್ವ ಹಾಲು ದಿನ'ದ ಧ್ಯೇಯ ಘೋಷ ವಿಶ್ವ ಸಮುದಾಯಕ್ಕೆ ಅಗತ್ಯವಿರುವ ಪೌಷ್ಠಿಕಾಂಶಯುಕ್ತ ಹಾಲು ಮತ್ತದರ ಉತ್ಪನ್ನಗಳ 'ಜಾಗತಿಕ ಆಹಾರ'ವನ್ನು ಒದಗಿಸುವಲ್ಲಿ ಹೈನೋದ್ಯಮ ಪ್ರಮುಖ ಪಾತ್ರವನ್ನು ಸಂಭ್ರಮಿಸುವುದಾಗಿದೆ. ಭಾರತೀಯ ಹೈನೋದ್ಯಮದಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡುತ್ತಾ ಬಂದಿರುವ ಕರ್ನಾಟಕ ಹಾಲು ಮಹಾಮಂಡಳ ಹಾಲುತ್ಪಾದಕ ಸದಸ್ಯ ರೈತ ಸಮುದಯ ಹಾಗೂ ವಿಶ್ವ ಗ್ರಾಹಕರಿಗೆ ಅಮೂಲ್ಯ ಕೊಡುಗೆ ನೀಡುವಲ್ಲಿ ತನ್ನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸುತ್ತ ಬಂದಿದ್ದು, ವಿಶ್ವ ಹೈನೋದ್ಯಮದೊಂದಿಗೆ ದಿಟ್ಟ ಹೆಜ್ಜೆ ಹಾಕುತ್ತ ಸಾಗುತ್ತಿದೆ.

ಹೀಗೆ ಹಾಲು ಉತ್ಪಾದಕ ರೈತರ ಆರ್ಥಿಕ–ಸಾಮಾಜಿಕ ಸುಧಾರಣೆಯೊಂದಿಗೆ ವಿಶ್ವ ಸಮುದಾಯದ ಆರೋಗ್ಯ ವೃದ್ಧಿಯಲ್ಲಿ ಡೇರಿ ಉದ್ಯಮ ಮಹತ್ತರ ಪಾತ್ರ ವಹಿಸುತ್ತಾ ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆಯ ಆಶೋತ್ತರಗಳು ಈಡೇರುವ ಮೂಲಕ 'ವಿಶ್ವ ಹಾಲು ದಿನ' ಯಶಸ್ವಿಯಾಗಿ ಆಚರಣೆಗೊಳ್ಳಲೆಂಬುದೇ ಎಲ್ಲರ ಸದಾಶಯವಾಗಿದೆ. #World Milk Day# Enjoy Dairy.

# 20 ವರ್ಷಗಳಲ್ಲಿ 20 ಶಾಖೆಗಳ ತೆರೆಯುವ ಮೂಲಕ ತೃಪ್ತಿಕರ ಸೇವೆ ಸದಸ್ಯರ ಆರ್ಥಿಕ ಸ್ವಾವಲಂಬನೆಯ ಆಶಾಕಿರಣ

## ಶ್ರೀ ಕಾಳಿದಾಸ ಪತ್ತಿನ ಸಹಕಾರ ಸಂಘ ನಿ., ಕಮತಗಿ




**ಭಾರತದಲ್ಲಿ ಸಹಕಾರ ಚಳವಳಿಗೆ 120 ವರ್ಷಗಳ ಸುದೀರ್ಘ ಇತಿಹಾಸವಿದೆ. ವಿಶ್ವದಲ್ಲಿಯೇ ಅತ್ಯಂತ ಬೃಹತ್ತಾದ ಸಹಕಾರ ಚಳವಳಿಯನ್ನು ಹೊಂದಿದ ರಾಷ್ಟ್ರ ನಮ್ಮದು. ಸಹಕಾರ ಸಂಸ್ಥೆಗಳು ದೇಶದ ಆರ್ಥಿಕ ಸುಸ್ಥಿರತೆಗೆ ಅಪಾರ ಕೊಡುಗೆಯನ್ನು ನೀಡುತ್ತಿವೆ. ಸಹಕಾರ ತತ್ವ ಮತ್ತು ಆಚರಣೆಯ ಕಾರ್ಯ ವ್ಯಾಪ್ತಿಯಲ್ಲಿ ಸಂಘಟಿತಗೊಂಡ ಸಹಕಾರ ಸಂಸ್ಥೆಗಳು ಅದಮ್ಯ ಚೈತನ್ಯದೊಂದಿಗೆ ಕಾರ್ಯ ಮಾಡುತ್ತಿವೆ. ಸಹಕಾರ ಕ್ಷೇತ್ರದ ಬಗ್ಗೆ ಮಾಜಿ ಪ್ರಧಾನಿ ಪಂಡಿತ್ ಜವಹರಲಾಲ್ ನೆಹರೂರವರ ಅಪೇಕ್ಷೆಯಂತೆ ಪ್ರತಿ ಹಳ್ಳಿಯಲ್ಲಿಯೂ ಸ್ವಾವಲಂಬನೆ, ಸಹಕಾರ ಹಾಗೂ ಪರಸ್ಪರ ಸಹಾಯದ ಆಧಾರದ ಮೇಲೆ ಸಂಘಟನೆಗೊಂಡು ತನಗೆ ತಾನೇ ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಬಲ್ಲ. ಒಂದು ಸಹಕಾರ ಸಂಘದ ಅವಶ್ಯಕತೆ ಇದ್ದು ತನ್ಮೂಲಕ ಸಹಕಾರ ಕೃಷಿ ಪದ್ಧತಿಗೆ ಸಣ್ಣ ರೈತರನ್ನು ಒಂದುಗೂಡಿಸಬೇಕು, ಆಗ ಹಳ್ಳಿಗಳು ಸರ್ವತೋಮುಖ ಅಭಿವೃದ್ಧಿಗೆ ಸಾಧನವಾಗುತ್ತವೆ.**

ಭಾರತದಲ್ಲಿ ಕೈಮಗ್ಗ ವಸ್ತ್ರೋದ್ಯಮ ಒಂದು ಪ್ರಾಚೀನಕಾಲದ ಸಂಪ್ರಾದಾಯಿಕ ತಾಂತ್ರಿಕತೆ ಹಾಗೂ ವಿನ್ಯಾಸಗಳನ್ನು ಹೊಂದಿದೆ. ಬಾಗಲಕೋಟೆ ಜಿಲ್ಲೆಯ ಇಳಕಲ್, ಹುನಗುಂದ, ಕಮತಗಿ ಸೇರಿದಂತೆ ಜಿಲ್ಲೆಯ ವಿವಿಧೆಡೆ ಹಲವು ಶತಮಾನಗಳಿಂದ ಬಂದಿರುವ ನೇಕಾರಿಕೆಯನ್ನು ಕುಟುಂಬಗಳು ಮುಂದುವರೆಸಿಕೊಂಡು ಬಂದಿದ್ದರೆ. ನೇಕಾರರು ಮತ್ತು ರೈತರ ಕುಟುಂಬಗಳಿಗೆ ಆರ್ಥಿಕವಾಗಿ ಸಬಲರನ್ನಾಗಿ ಮಾಡುವ ದೃಷ್ಟಿಯಿಂದ ಬಾಗಲಕೋಟ ಜಿಲ್ಲೆಯ ಕಮತಗಿ ಪಟ್ಟಣದ ಶ್ರೀ ಕಾಳಿದಾಸ ಪತ್ತಿನ ಸಹಕಾರ ಸಂಘವು ಕಳೆದ 20 ವರ್ಷಗಳ ಹಿಂದೆ ಸ್ಥಾಪನೆಯಾಗಿದೆ.

ಕಮತಗಿ ಪಟ್ಟಣದಲ್ಲಿ ಶ್ರೀ ಚಂದ್ರಶೇಖರಪ್ಪ ಬಸಪ್ಪ ಹುಗ್ಗಿ ಅವರ ನೇತ್ರತ್ವದಲ್ಲಿ ದಿನಾಂಕ : 13-03-2004ರಲ್ಲಿ 500 ಜನ ಸದಸ್ಯರು ರೂ. 5ಲಕ್ಷ ಶೇರು ಬಂಡವಾಳದೊಂದಿಗೆ ಶ್ರೀ ಕಾಳಿದಾಸ ಕೋ ಆಪ್ ಕ್ರೆಡಿಟ್ ಸೊಸಾಯಿಟಿ ಸಣ್ಣ ಪ್ರಮಾಣದ ಕಟ್ಟದಲ್ಲಿ ಪ್ರಾರಂಭವಾಯಿತು. 20 ವರ್ಷಗಳವರೆಗೆ ಸಂಘದ ಅಧ್ಯಕ್ಷರಾಗಿ ಚಂದ್ರಶೇಖರಪ್ಪ ಬಸಪ್ಪ ಹುಗ್ಗಿಯವರು ಸಂಘವನ್ನು ನಡಿಸಿಕೊಂಡು ಬಂದಿದ್ದರು.

ಪ್ರಸ್ತುತ ಸಂಘದ ಅಧ್ಯಕ್ಷತೆಯನ್ನು ಬಸವಂತಪ್ಪ ಚನ್ನಬಸಪ್ಪ ಅಂಟರದಾನಿ ಅವರು ಸಂಘವನ್ನು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸುತ್ತಿದ್ದಾರೆ. ಸಂಘವು ಪ್ರಸ್ತುತ ಸುಮಾರು ರೂ. 119 ಕೋಟಿಗಳಷ್ಟು ಶೇರು ಬಂಡವಾಳ 10087 ಸದಸ್ಯರು ಮತ್ತು ರೂ. 100 ಕೋಟಿಗಳಷ್ಟು ಠೇವಣಿ ಸಂಗ್ರಹ ಮಾಡಿದೆ. ರೂ. 500 ಕೋಟಿ ದುಡಿಯುವ ಬಂಡವಾಳ ಹೊಂದಿದೆ.

**ಸಂಘದ ಉದ್ದೇಶ :** ಸಂಘದ ಸದಸ್ಯರಿಗೆ ಸಾಲಗಳನ್ನು ನೀಡುವ ಮೂಲಕ ಅವರ ಜೀವನ ಮಟ್ಟವನ್ನು ವೃದ್ಧಿಸುವುದು. ಕೃಷಿ ಆಧಾರಿತ ಉದ್ದಿಮೆ, ನೇಕಾರಿಕೆ, ಸ್ವಂತ ಉದ್ದಿಮೆದಾರರಿಗೆ ಹಣಕಾಸು ಪೂರೈಸುವುದು. ಸದಸ್ಯರ ಅವಲಂಬಿತರಿಗೆ ಆರ್ಥಿಕ ಭದ್ರತೆಯನ್ನು ಒದಗಿಸುವ ಉದ್ದೇಶದಿಂದ ಸಾಮಾನ್ಯ ವಿಮಾ ನಿಗಮ, ಜೀವ ವಿಮಾ ನಿಗಮಗಳು ಒದಗಿಸುವ ಸಾಮೂಹಿಕ ವಿಮಾ ಭದ್ರತೆಗಳನ್ನು ಒದಗಿಸುವುದು. ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವ ಜನಾಂಗದವರನ್ನು ಸಂಘದ ಸದಸ್ಯರನ್ನಾಗಿಸಿ ಅವರುಗಳನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಅಭಿವೃದ್ಧಿಗೊಳಿಸುವ ಯೋಜನೆಗಳನ್ನು




ರೂಪಿಸುವುದು. ಸಂಘದ ಸದಸ್ಯರುಗಳ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಸಾಲ ಒದಗಿಸುವುದು ಸಂಘದ ಪ್ರಮುಖ ಉದ್ದೇಶಗಳಾಗಿವೆ.

**ಸಂಘದ ಶಾಖೆಗಳು :** ಸಂಘವು ಈಗಾಗಲೇ ಬೆಳಗಾವಿ ಮತ್ತು ಗುಲಬುರ್ಗ ಪ್ರಾಂತ್ಯದಲ್ಲಿ 20 ಶಾಖೆಗಳನ್ನು ಪ್ರಾರಂಭಿಸಿದೆ. ಅವುಗಳೆಂದರೆ ಐಹೊಳೆ, ಬಾಗಲ ಕೋಟ, ಕಲಾದಗಿ, ನಿಡಗುಂದಿ, ಮುದ್ದೇ ಬಿಹಾಳ, ಕೊಡಲ ಸಂಗಮ ಕ್ರಾಸ್. ಇಳಕಲ್, ಕುಷ್ಟಗಿ, ಗದ್ದನಕೇರಿ ಕ್ರಾಸ್, ಹನಮನಾಳ, ಬೇವೂರ, ಸುತಗುಂಡರ, ದನ್ನೂರ, ಕರಡಿ, ಜಾಲಿಹಾಳ, ಕಾಟಪೂರ ಕ್ರಾಸ್, ಕಟಗೇರಿ, ಲೋಕಾಪೂರ, ಕೋಲ್ಹಾರ ಮತ್ತು ಕಮತಗಿ ಬಜಾರ ಶಾಖೆಗಳನ್ನು ಹೊಂದಿರುವುದನ್ನು ಗಮನಸಿದರೆ. ಸಂಘದ ಆಡಳಿತ ಮಂಡಳಿಯ ಬದ್ಧತೆ, ನೌಕರ ವರ್ಗದವರ ದಕ್ಷತೆ ಹಾಗೂ ಸದಸ್ಯರು ಸಂಘದಜತೆ ಹೊಂದಿರುವ ಒಡನಾಟ ಇವೆಲ್ಲವು ಸಂಘದ ಪ್ರಗತಿದಾಯಕ ಕ್ಷೇತ್ರದ ವಿಸ್ತರಣೆಯನ್ನು ತೋರಿಸುತ್ತದೆ.

| ಸಂಘದ ನಾಲ್ಕು ವರ್ಷದ ಪ್ರಗತಿ ಪಕ್ಷಿ ನೋಟ | | | | |
|---|---|---|---|---|
| ವಿವರಗಳು | 31/03/2021 | 31/03/2022 | 31/03/2023 | 31/03/2024 |
| ಸಾಮಾನ್ಯ ಸದಸ್ಯರು | 8500 | 9008 | 9639 | 10087 |
| ಶೇರು ಬಂಡವಾಳ | 32668000 | 36434300 | 40614100 | 44801970 |
| ನಿಧಿಗಳು | 39549790 | 52655215 | 69364447 | 90661086 |
| ಠೇವುಗಳು | 626747147 | 735160424 | 884352743 | 1054666352 |
| ಸಾಲ ಮತ್ತು ಮುಂಗಡಗಳು | 472885289 | 550389643 | 716115771 | 925955994 |
| ದುಡಿಯುವ ಬಂಡವಾಳ | 712583460 | 622457884 | 1017166272 | 1213972430 |
| ವಾರ್ಷಿಕ ವಹಿವಾಟು | 3266324915 | 3786044500 | 4718697873 | 5493189924 |
| ನಿವ್ವಳ ಲಾಭ | 13618521 | 18207943 | 22834980 | 23843020 |

**ಆಡಳಿತ ಮಂಡಳಿ ನಿರ್ದೇಶಕರು :**

**ಅಧ್ಯಕ್ಷರು : ಬಸವಂತಪ್ಪ ಚ. ಅಂಟರತಾನಿ, ಉಪಾಧ್ಯಕ್ಷರು : ಯಲ್ಲಪ್ಪ ಧ. ಆಡಿನ**

**ನಿರ್ದೇಶಕರು : ಮಲ್ಲನಗೌಡ ಬಾ. ಗೌಡರ, ಯಲ್ಲಪ್ಪ ಯ. ಮಜ್ಜಗಿ, ಭರಮಪ್ಪ ಹ. ಸಿದ್ದಾಪೂರ, ಬಸವರಾಜ ಯ. ಕೋಳಮಲಿ, ಬಾಲಪ್ಪ ಶಿ. ಉಣ್ಣೆಭಾವಿ, ಶ್ರೀಮತಿ ಯಲ್ಲವ್ವ ಸಂ. ಮೇಟಿ, ಗುರುಲಿಂಗಯ್ಯ ರಾ. ಜಂಗಮರ, ಶ್ರೀಮತಿ ರುಕ್ಮವ್ವ ಶಿ. ಪಾಟೀಲ, ಯಲಗುರ್ದಪ್ಪ ಗ್ಯಾ. ವಾಲಿಕಾರ, ರಾಮಣ್ಣ ಹೊ. ಪೂಜಾರಿ, ಲಕ್ಷ್ಮಣ ಬ. ಭಜಂತ್ರಿ**

## ನೇಕಾರರ ಹಾಗೂ ರೈತರ, ಸದಸ್ಯರ ಆರ್ಥಿಕ ಚಟುವಟಿಕೆಗೆ ಪೋಷಕ

# ಸಹಕಾರಿಗಳ ಆರ್ಥಿಕ ಹಿತರಕ್ಷಣೆ ನಮ್ಮ ಗುರಿ...

## ಅಧ್ಯಕ್ಷರಾದ ಬಸವಂತಪ್ಪ ಅಂಬರದಾನಿ



ಬಸವಂತಪ್ಪ ಅಂಟರದಾನಿ ಅವರು, ತಮ್ಮ ಸಹಕಾರ ಸೇವಾ ಅವಧಿಯಲ್ಲಿ ಸಹಕಾರತತ್ವ ಹಾಗೂ ಸಿದ್ಧಾಂತಕ್ಕೆ ಬದ್ಧರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀ ಕಾಳಿದಾಸ ಪತ್ತಿನ ಸಹಕಾರ ಸಂಘದ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸುತ್ತಿದ್ದಾರೆ. ಕೈಮಗ್ಗ ನೇಕಾರರು, ಒಣ ಬೇಸಾಯದ ರೈತರ ಬದುಕನ್ನು ಆರ್ಥಿಕವಾಗಿ ಸಬಲಗೊಳಿಸುವುದು, ಅಬಲರಾದವರನ್ನು ಆರ್ಥಿಕ ಸಂಕಷ್ಟಗಳಿಂದ ದೂರ ಮಾಡಲು ಶ್ರೀ ಕಾಳಿದಾಸ ಪತ್ತಿನ ಸಹಕಾರ ಸಂಘದ ಪ್ರೇರಣೆಯಾಗಿದ್ದಾರೆ.

ಇದರ ಜೊತೆ ಐಹೊಳೆ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ, ಅಮೀನಗಡ ಭೀಮಾಂಬಿಕಾ ಪತ್ತಿನ ಸಹಕಾರ ಸಂಘ ಅಧ್ಯಕ್ಷರಾಗಿ, ನಿಂಬಲಗುಂದಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ, ತಾಲೂಕು ಒಕ್ಕಲುತನ ತನ್ನ ಹುಟ್ಟುವಳಿ ಮಾರಾಟ ಸಹಕಾರಿ ಸಂಘ ಅಧ್ಯಕ್ಷರಾಗಿ, ಬಾಗಲಕೋಟ ವಿಜಯಪುರ ಬರಗಾಲ ನಿರ್ವಹಣಾ ಸಹಕಾರ ಸಂಘದ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಬಾಗಲಕೋಟ ಜಿಲ್ಲಾ ಕೇಂದ್ರ ಬ್ಯಾಂಕ್ ನಿರ್ದೇಶಕರಾಗಿಯೂ ಸಹ ಸೇವೆ ಸಲ್ಲಿಸಿರುತ್ತಾರೆ.

ಪ್ರಸ್ತುತ ಗಾಯತ್ರಿ ಪತ್ತಿನ ಸಹಕಾರ ಸಂಘದ ಐಹೊಳೆ ಶಾಖೆಯ ಸಲಹಾ ಸಮಿತಿಯ ಸದಸ್ಯರಾಗಿದ್ದಾರೆ. ತಾಲೂಕು ಒಕ್ಕಲುತನ ಹುಟ್ಟವಳಿ ಮಾರಾಟ ಸಹಕಾರ ಸಂಘದ ನಿರ್ದೇಶಕರಾಗಿದ್ದಾರೆ. ಅಮೀನ ಗಡದ ಉಣ್ಣೆ ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರಾಗಿದ್ದಾರೆ. ಸಹಕಾರ ವಲಯದಲ್ಲಿ ಅಪಾರ ಅನುಭವ ಹೊಂದಿದ್ದಾರೆ. ಶ್ರೀ ಕಾಳಿದಾಸ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ನೇಕಾರರ ಹಾಗೂ ರೈತರು ಬದುಕನ್ನು ಬಹಳ ಹತ್ತಿರದಿಂದ ಕಂಡವರು.

ಅಧ್ಯಕ್ಷರು ಶ್ರೀ ಕಾಳಿದಾಸ ಸಹಕಾರ ಸಂಘದ ಬಗ್ಗೆ ಮತ್ತು ರಾಜ್ಯದ ಸಹಕಾರ ಚಳವಳಿಯ ಕುರಿತು ಮಾತನಾಡಿದ್ದಾರೆ.

**ಸಂಸ್ಥೆಯ ಬಗ್ಗೆ :** ದಿನಾಂಕ : 13-03-2004 ರಂದು 500 ಸದಸ್ಯರಿಂದ ಕೇವಲ 5 ಲಕ್ಷ ಶೇರು ಬಂಡವಾಳದೊಂದಿಗೆ ಪ್ರಾರಂಭವಾದ ಈ ಸಂಸ್ಥೆಯು ಪ್ರಸ್ತುತ ಸುಮಾರು ರೂ.119 ಕೋಟಿಗಳಷ್ಟು ಶೇರು ಬಂಡವಾಳ, 10087 ಸದಸ್ಯರು ಮತ್ತು ರೂ.100 ಕೋಟಿಗಳಷ್ಟು ಠೇವಣಿ ಸಂಗ್ರಹ ಮಾಡಿದೆ. ಇಂದಿನ ಮೊಬೈಲ್ ಯುಗಕ್ಕೆ ಕೂಡಾ ಸರಿಹೊಂದುವ ಹಾಗೆ ತನ್ನೆಲ್ಲ ಗ್ರಾಹಕರಿಗೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ದೊರೆಯುವ NEFT / RTGS ಮೊಬೈಲ್ ಆ್ಯಪ್ ಬಳಕೆ ಕೋರ್ ಬ್ಯಾಂಕಿಂಗ್ ತಂತ್ರಜ್ಞಾನದ ವ್ಯವಸ್ಥೆ ಅಳವಡಿಸಿಕೊಂಡಿದೆ. ಈ ಎಲ್ಲ ಬ್ಯಾಂಕಿಂಗ್ ಸೇವೆಗಳನ್ನು ಗ್ರಾಹಕರಿಗೆ ಒದಗಿಸುವುದರೊಂದಿಗೆ ಜನರ ಮನಸ್ಸುಗಳನ್ನು ಬೆಸೆಯುವ ಸಾಮರ್ಥ್ಯವಿದೆ. ಸಂಸ್ಥೆಯು ದಿನಾಂಕ : 24-08-2023 ರಂದು ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ಅವರು ಕಮತಗಿ ಕ್ರಾಸ್‌ನಲ್ಲಿ ನಿರ್ಮಿಸಿದ ಹೊಸ ಕಟ್ಟಡವನ್ನು ಲೋಕಾರ್ಪಣೆ ಮಾಡಿದ್ದು ಅವಿಸ್ಮರಣೀಯ ಸಂಗತಿಯಾಗಿದೆ.

- **ಸಾಲ ವಸೂಲಾತಿ ಬಗ್ಗೆ...**

ಸಂಘದ ವಸೂಲಾತಿಯ ಬಗ್ಗೆ ತೃಪ್ತಿ ಇದೆ. ಸಾಲ ನೀಡಿಕೆ ಪ್ರಮಾಣವು ವರ್ಷದಿಂದ ವರ್ಷಕ್ಕೆ ಹೆಚ್ಚಾಗಿದೆ. ಸಾಲಗಾರರು ಸಂಘದ ಸಿಬ್ಬಂದಿಗಳ ಜೊತೆ ಉತ್ತಮದ ಸಹಕಾರವನ್ನು ನೀಡುವ ಮೂಲಕ ಕಾಲ ಕಾಲಕ್ಕೆ ಪಡೆದ ಹಣವನ್ನು ಹಿಂದಿರುಗಿಸುತ್ತಿದ್ದಾರೆ. ಕೇವಲ ಎರಡು ದಶಕಗಳಲ್ಲಿ ಸಂಘವು 20 ಶಾಖೆಗಳನ್ನು ಆರಂಭಿಸಿ ಎಲ್ಲವೂ ಲಾಭದಲ್ಲಿ ನಡೆಯುತ್ತಿರುವುದು ತೃಪ್ತಿಕರವಾಗಿದೆ.

- **ಸಂಸ್ಥೆಯ ಮುಂದಿನ ಗುರಿ, ಯೋಜನೆಗಳು ಏನು?**

ಗ್ರಾಮೀಣಜನರಿಗೆ ನೆರವಾಗುವ ದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಐದು ಶಾಖೆಗಳನ್ನು ಆರಂಭಿಸುವ ಯೋಜನೆ ರೂಪಿಸಲಾಗಿದೆ. ಈ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಗ್ರಾಹಕರಿಗೆ ಸಾಲ ಸೌಲಭ್ಯ ನೀಡುವುದು. ಇನ್ನು ಹೆಚ್ಚಿನ ಮಟ್ಟದಲ್ಲಿ ಠೇವಣಿಗಳನ್ನು ಸಂಗ್ರಹಿಸುವ ಮೂಲಕ ಗ್ರಾಮೀಣ ಜನರ ಆರ್ಥಿಕ ಸಬಲತೆಯನ್ನು ತರವುದು. ನಿರುದ್ಯೋಗ ಯುವಕರ ಕೈಗೆ ಕೆಲಸ ನೀಡುವ ವ್ಯವಸ್ಥೆಯನ್ನು ಮಾಡಲಾಗುತ್ತದೆ.

- **ಶಾಖೆಗಳ ಬಗ್ಗೆ...**

ಸದಸ್ಯರ ಆರ್ಥಿಕ ವ್ಯವಸ್ಥೆಯನ್ನು ನೋಡಿಕೊಂಡು ಸಾಲವನ್ನು ನೀಡಲಾಗುತ್ತದೆ. 20 ವರ್ಷಗಳಲ್ಲಿ ಕೇಂದ್ರ ಕಚೇರಿಯನ್ನು ಸೇರಿ ಒಟ್ಟು 21 ಶಾಖೆಗಳನ್ನು ಹೊಂದುವ ಮೂಲಕ ಸಾವಿರಾರು ಜನರಿಗೆ ಆರ್ಥಿಕವಾಗಿ ನೆರವಾಗುತ್ತಿದೆ. ಈ ಇಪತ್ತು ವರ್ಷದಲ್ಲಿ ಯಾವುದೇ ರೀತಿ ಕಟ್ಟಬಾಕಿ ಇರುವುದಿಲ್ಲ. ಸುಮಾರು 150ಕ್ಕೂ ಅಧಿಕ ಸಿಬ್ಬಂದಿಗಳನ್ನು ಹೊಂದುವುದರ ಮೂಲಕ ಜನಮನ್ನಣೆ ಪಡೆದಿದೆ. ಈಗಾಗಲೇ ಕಮತಗಿ ಗ್ರಾಮ, ಕಮತಗಿ ಕ್ರಾಸ್‌ನಲ್ಲಿ



ನಾವು ಮಾಡುವ ಕೆಲಸದಲ್ಲಿ ನಿಸ್ವಾರ್ಥ ಸೇವೆ ಮನೋಭಾವನೆ, ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸುತ್ತಾ ಹೋದರೆ ಯಶಸ್ಸು ಕಂಡಿತ ಬರುತ್ತದೆ. ದಿನಾಂಕ : 13.03.2004 ರಂದು ಪ್ರಾರಂಭಗೊಂಡ ಈ ಸಂಸ್ಥೆಗೆ 20 ವಸಂತಗಳನ್ನು ಪೂರ್ಣಗೊಳಿಸಿದೆ. ನಮ್ಮ ಸಂಘವು ಪರಸ್ಪರ ಸೌಹಾರ್ದತೆಯಿಂದ ಕೂಡಿ ಬಾಳುವದರೊಂದಿಗೆ ಆರ್ಥಿಕ ಅಭಿವೃದ್ಧಿ ಪೂರಕವಾಗಿದೆ. ಈ ಇಪತ್ತು ವರ್ಷ ಕ್ರಮಿಸಿದ ದಾರಿ ಸಣ್ಣದಾದರೂ ಸಾಧಿಸಿದ ಗುರಿ ಸಣ್ಣದಲ್ಲವೆಂಬ ಆತ್ಮವಿಶ್ವಾಸ ಮೂಡುತ್ತದೆ. ಇದಕ್ಕೆಲ್ಲ ಬೆಂಗಾವಲಾಗಿ ನಿಂತಿರುವ ನಮ್ಮ ಸಂಘದ ಅಧ್ಯಕ್ಷರು, ಆಡಳಿತ ಮಂಡಳಿಯವರು ಹಾಗೂ ನನ್ನ ಸಕಲ ಸಿಬ್ಬಂದಿ ವರ್ಗದವರ ಸಹಾಯ ಸಹಕಾರಕ್ಕೆ ನಾನು ಋಣಿ.

▸▸ ಹೊನ್ನಪ್ಪ ಮಲ್ಲಪ್ಪ ಹರದೊಳ್ಳಿ, ಮುಖ್ಯಕಾರ್ಯನಿರ್ವಹಣಾಧಿಕಾರಿ

ಹಾಗೂ ಐಹೊಳೆ ಸ್ವಂತ ಕಟ್ಟಡವಿದೆ. ಮುಂದಿನ ದಿನಗಳಲ್ಲಿ ಎಲ್ಲಾ ಶಾಖೆಗಳನ್ನು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುವಂತೆ ಮಾಡುವುದು ಈ ಸಂಬಂಧ ಯೋಜನೆಗಳನ್ನು ರೂಪಿಸಲಾಗುತ್ತಿದೆ.

- **ಸಂಸ್ಥೆಯ ಸಾಮಾಜಿಕ ಸೇವೆ...**

ಸಹಕಾರ ತತ್ವಗಳಲ್ಲಿ ಒಂದಾದ ಸಾಮಾಜಿಕ ಕಳಕಳಿಯ ಆಧಾರವಾಗಿ ಸದಸ್ಯರುಗಳಿಗೆ ಆರೋಗ್ಯ ತಪಾಸಣಾ ಶಿಬಿರಗಳು, ಯಶಸ್ವಿನಿ ಯೋಜನೆ, ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಸಂಘದ ಸದಸ್ಯರಿಗೆ ಮರಣೋತ್ತರ ನಿಧಿ, ಪ್ರವಾಹ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆದೇಣಿಗೆ ನೀಡಲಾಗಿದೆ. ಸಹಕಾರ ಭವನ ನಿರ್ಮಾಣಕ್ಕೆ ಸಹಾಯಧನ ವಿತರಣೆ. ಪ್ರಧಾನ ಕಛೇರಿಯ ನೂತನ ಕಟ್ಟಡ ಉದ್ಘಾಟನೆ ಸಮಯದಲ್ಲಿ ಉಚಿತವಾಗಿ 5 ಜೊಡಿಗಳಿಗೆ ಸಾಮೂಹಿಕ ವಿವಾಹವನ್ನು ನೇರವೇರಿಸಲಾಗಿದೆ. ಧಾರ್ಮಿಕ ಕಾರ್ಯಕ್ರಮಗಳಿಗೆ ಅನ್ನ ಸಂತರ್ಪಣೆ ಸಂದರ್ಭದಲ್ಲಿ ದೇಣಿಗೆ ನೀಡುವುದು ಮತ್ತು ಸಂಘದ ಸಿಬ್ಬಂದಿಗಳಿಗೆ ಭವಿಷ್ಯ ನಿಧಿ ಯೋಜನೆ ಜಾರಿಯಲ್ಲಿದ್ದು, ಆರೋಗ್ಯ ವಿಮೆ ಮತ್ತುಜೀವ ವಿಮೆ ಒದಗಿಸಲಾಗುತ್ತದೆ.

- **ಸಹಕಾರ ವಲಯದ ಕುರಿತು...**

ಸಹಕಾರ ವಲಯವು ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಅದರಲ್ಲಿಯೂ ರೈತರು ಹಾಗೂ ಹೈನುಗಾರರ ಬದುಕಿನ ಆಸರೆಯಂತೆ ಕಾರ್ಯನಿರ್ವಹಿಸುತ್ತಿದೆ. ದೇಶದ ಆರ್ಥಿಕ ವ್ಯವಸ್ಥೆಗೆ ತನ್ನದೇ ಆದ ಕೊಡುಗೆ ನೀಡುತ್ತಿರುವ ಸಹಕಾರಿ ಆಂದೋಲನ ಕೋಟ್ಯಾಂತರ ಜನರ ಸ್ವಾವಲಂಬಿ ಬದುಕಿಗೆ ಆಸರೆಯಾಗಿದೆ. ನಮ್ಮ ಜಿಲ್ಲೆಯ ನೇಕಾರರು, ಕೃಷಿ, ಹೈನುಗಾರಿಕೆ, ಮಾರಾಟ, ಕೃಷಿಯೇತರ, ಸಹಕಾರ ಬ್ಯಾಂಕ್‌ಗಳು ಸೇರಿದಂತೆ ವಿವಿಧ ವಲಯಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕದಲ್ಲಿ ರೈತರಿಗೆ ಪೂರಕವಾಗಿ ಪತ್ತಿನ ಸಹಕಾರ ಸಂಘಗಳು ರಾಜ್ಯದ ಆರ್ಥಿಕ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿವೆ. ಜಿಲ್ಲೆಯ ಸಹಕಾರ ಚಳವಳಿ ಬಲವರ್ಧನೆಗೆ ಹಿರಿಯ ಸಹಕಾರಿ ಮುಖಂಡರು, ಎಸ್. ಆರ್. ಪಾಟೀಲ ಮತ್ತು ಮಾಜಿ ಸಚಿವರು ಹಾಗೂ ಶಾಸಕರಾದ ಎಚ್.ವಾಯ್ ಮೇಟಿ ಅವರ ಮಾರ್ಗದರ್ಶನದಲ್ಲಿ ಸಹಕಾರಿ ಆಂದೋಲನ ಉತ್ತಮವಾಗಿ ಬೆಳವಣಿಗೆ ಕಾಣುತ್ತಿದೆ ಎಂಬುದು ಹೆಮ್ಮೆ ಉಂಟು ಮಾಡುತ್ತಿದೆ.

- **ಸಹಕಾರ ಶಿಕ್ಷಣ, ತರಬೇತಿ ಹಾಗೂ ಪ್ರಚಾರದ ಕುರಿತು...**

ಸಹಕಾರ ಸಂಸ್ಥೆಗಳ ಉತ್ತಮ ಬೆಳವಣಿಗೆಯ ದೂರದೃಷ್ಟಿಯಿಂದ ಸಹಕಾರ ಶಿಕ್ಷಣ ಹಾಗೂ ತರಬೇತಿಯ ಅಗತ್ಯವಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಮತ್ತು ಜಿಲ್ಲಾ ಸಹಕಾರ ಯೂನಿಯನ್‌ಗಳು ತಮ್ಮ ಧ್ಯೇಯೋದ್ದೇಶಗಳನ್ನು ಅನುಷ್ಠಾನ ಗೊಳಿಸುವಲ್ಲಿ ಯಶಸ್ವಿಯಾಗಿವೆ. ಸಹಕಾರಿ ಕ್ಷೇತ್ರದ ಆಡಳಿತ ಮಂಡಳಿ ಸಿಬ್ಬಂದಿ ವರ್ಗದವರಿಗೆ ಹಾಗೂ ರೈತರಿಗೆ ಸರ್ಕಾರದಿಂದ ನೀಡುವ ಯೋಜನೆಗಳ ಕುರಿತು ಹಾಗೂ ಅದರಲ್ಲಿಯೂ ವಿಶೇಷವಾಗಿ ಪ್ರಾಥಮಿಕ ಹಂತದ ಸಹಕಾರ ಸಂಘಗಳಾದ ಕೃಷಿ ಪತ್ತಿನ ಸಹಕಾರ ಸಂಘಗಳು, ಹಾಲು ಉತ್ಪಾದಕ ಸಹಕಾರ ಸಂಘಗಳ ನೂತನ ಆಡಳಿತ ಮಂಡಳಿ ಸದಸ್ಯರಿಗೆಅವರ ಜವಾಬ್ದಾರಿಗಳ ಕುರಿತಂತೆ ತರಬೇತಿ ನೀಡಿ, ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ನಿರಂತರವಾಗಿ ಉತ್ತೇಜನ ನೀಡಬೇಕಾದ ಅಗತ್ಯವಿದೆ. ಸಹಕಾರ ವಾರ್ತಾಪತ್ರಿಕೆ ಮೂಲಕ ಜನರಲ್ಲಿ ಕ್ಷೇತ್ರದ ವಿದ್ಯಾಮಾನಗಳ ಬಗ್ಗೆ ಅರಿವು ಮೂಡಿಸಲಾಗುತ್ತಿರುವುದು ಸ್ವಾಗತಾರ್ಹವಾಗಿದೆ.

**ಶ್ರೀಯುತರು ಸಹಕಾರಿ ಕ್ಷೇತ್ರದಲ್ಲಿ ಅರ್ಪಣಾಭಾವದಿಂದ ತೊಡಗಿಸಿ ಕೊಂಡು ಶ್ರೀ ಕಾಳಿದಾಸ ಪತ್ತಿನ ಸಹಕಾರ ಸಂಘ ಸಂಸ್ಥೆಯನ್ನು ಕಟ್ಟಿ ಬೆಳೆಸುತ್ತಿದ್ದಾರೆ. ಸಂಸ್ಥೆಯ ಆಡಳಿತ ಮಂಡಳಿಯವರ ಉತ್ತಮವಾದ ಸಹಕಾರ ನೀಡುತ್ತಿದ್ದಾರೆ. ಸಂಘದ ಏಳಿಗೆಗೆ ಸಲಹೆ, ಸೂಚನೆಗಳನ್ನು ಮಾರ್ಗದರ್ಶನ ಮಾಡುತ್ತಿದ್ದಾರೆ. ಸಂಘದ ಪ್ರಧಾನ ವ್ಯವಸ್ಥಾಪಕರಾದ ಹೊನ್ನಪ್ಪ ಮಲ್ಲಪ್ಪ ಹರದೊಳ್ಳಿ ಅವರ ಸೇವಾ ನಿಷ್ಠೆ, ಪ್ರಾಮಾಣಿಕತೆಯಿಂದ ಅತ್ಯುತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಸಿಬ್ಬಂದಿ ವರ್ಗದವರು ಬಹಳ ಒಳ್ಳೆಯ ರೀತಿ ಕೆಲಸ ಮಾಡಿದರ ಫಲವಾಗಿ ಸಂಘವು ರೈತರ ಬಗ್ಗೆ, ಆರ್ಥಿಕವಾಗಿ ಅಬಲರಾದವರ ಬಗ್ಗೆ ತಮಗಿರುವ ಅತೀವ ಕಾಳಜಿ ಇದೆಎಂದು ಈ ಸಂದರ್ಭದಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.**

### ಸದಸ್ಯರ ಆರ್ಥಿಕ ಸ್ವಾವಲಂಬನೆಗೆ ನೆರವು

# ಪ್ರಗತಿ ಪಥದಲ್ಲಿ ದಿ ಭಾರತಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ರಾಮನಗರ



ಸ್ಪರ್ಧಾತ್ಮಕ ಜಗತ್ತಿನಲ್ಲಿ ಖಾಸಗೀಕರಣ – ಜಾಗತೀಕರಣ ಆರ್ಥಿಕ ಉದಾರೀಕರಣಗಳಗಳ ನಡುವೆ ಬಲವಾಗಿ ಬೇರು ಬಿಟ್ಟಿರುವ ಸಹಕಾರ ಕ್ಷೇತ್ರವೂ ಸದಸ್ಯರ ಆರ್ಥಿಕ ಬಲವರ್ಧನೆಗಾಗಿ ಸುಧಾರಿತ ತಂತ್ರಜ್ಞಾನ ಆಧಾರಿತ ಸೇವೆಗಳನ್ನು ನೀಡುತ್ತಾ ಬಂದಿದೆ. ಒಂದು ಶತಮಾನದ ಅವಧಿಯಲ್ಲಿ ಸಹಕಾರ ಕ್ಷೇತ್ರವೂ ಆರ್ಥಿಕವಾಗಿ ಸಂಕಷ್ಟದಲ್ಲಿದ್ದ ಕೋಟ್ಯಾಂತರ ಜನರಿಗೆ ನೆರವು ನೀಡಿ, ಅವರನ್ನು ಸ್ವಾವಲಂಬಿಗಳನ್ನಾಗಿಸುವಲ್ಲಿಯೂ ಸಹ ಅತ್ಯಂತ ಪ್ರಭಾವಶಾಲಿ ಮತ್ತು ಪರಿಣಾಮಕಾರಿಯಾದ ಕ್ಷೇತ್ರ ಎಂಬುದನ್ನು ನಿರೂಪಿಸಿದೆ. ಸಹಕಾರ ತತ್ವ ಮತ್ತು ಆಚರಣೆಯ ಕಾರ್ಯವ್ಯಾಪ್ತಿಯಲ್ಲಿ ಸಂಘಟಿತಗೊಂಡು ಸಹಕಾರ ಸಂಸ್ಥೆಗಳು ಅದಮ್ಯ ಚೈತನ್ಯದೊಂದಿಗೆ ಕೆಲಸ ಮಾಡುತ್ತಾ ಯಶಸ್ಸನ್ನು ಕಾಣುತ್ತಿರುವುದನ್ನು ನೋಡಬಹುದಾಗಿದೆ.

ರೇಷ್ಮೆ ನಾಡು ಎಂಬ ಹೆಗ್ಗಳಿಕೆ ಹೊಂದಿರುವ ಜಿಲ್ಲೆ ರಾಮನಗರ. ಈ ಜಿಲ್ಲೆಯು ಈಗಾಗಲೇ ಸಹಕಾರ ಚಳವಳಿಯಲ್ಲಿ ಮುಂಚೂಣಿಯಲ್ಲಿ ಗುರುತಿಸಿಕೊಂಡಿದೆ. ವಿವಿಧ ರೀತಿಯ ಸಹಕಾರ ಸಂಸ್ಥೆಗಳು ಈ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಜಿಲ್ಲೆಯ ಅಬಲವರ್ಗದವರಿಗೆ ಆರ್ಥಿಕವಾಗಿ ನೆರವಾಗಿ ಅವರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಹಕಾರಿಯಾಗಿವೆ. ಇಂತಹ ಸಹಕಾರ ಸಂಸ್ಥೆಗಳಲ್ಲಿ ನಗರ ಪ್ರದೇಶಗಳಲ್ಲಿ ಸದಸ್ಯ ಆರ್ಥಿಕ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿರುವ ರಾಮನಗರ ಪಟ್ಟಣದ ದಿ ಭಾರತಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಸದಸ್ಯರ ಆರ್ಥಿಕ ಅವಶ್ಯಕತೆಗಳಿಗೆ ಸ್ಪಂದಿಸಿ, ಅವುಗಳಿಗೆ ಪೂರಕವಾದ ವಾತಾವರಣವನ್ನು ನಿರ್ಮಾಣ ಮಾಡಿ ಉತ್ತಮವಾದ ಸೇವೆಗಳನ್ನು ಕಲ್ಪಿಸುವ ಮೂಲಕ ನಿರಂತರವಾಗಿ ಯಶಸ್ಸು ಕಾಣುತ್ತಾ ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿದೆ.

ದಕ್ಷ ಅಧಿಕಾರಿಯಾಗಿ, ಸಹಕಾರಿ ಧುರೀಣರಾಗಿ ಬದುಕನ್ನು ಸಮಾಜ ಸೇವೆಗೆ ಮೀಸಲಿಟ್ಟ ವಿಶೇಷ ಜಿಲ್ಲಾಧಿಕಾರಿಗಳೂ ಆಗಿದ್ದ ಬಿ.ಎಲ್. ಲಕ್ಕೇಗೌಡರ ನೇತೃತ್ವದಲ್ಲಿ ರಾಮನಗರದ ದಿ ಭಾರತಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿಯ ಮುಖ್ಯ ಪ್ರವರ್ತಕರು ಹಾಗೂ ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಮುಖ್ಯಪ್ರವರ್ತಕರು ಆಗಿದ್ದರು. ಈ ಮೂಲಕ ಸಹಕಾರ ವಲಯ ಎಂದರೆ ಇದ್ದವರ ಜೊತೆ ಹಣ ಪಡೆದು, ಇಲ್ಲದವರಿಗೆ ಹಣ ನೀಡುವ ಉದ್ದೇಶವನ್ನು ಇಟ್ಟುಕೊಂಡು ಈ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಘದ ಸ್ಥಾಪನೆಗೆ ಶ್ರಮಿಸಿದವರಲ್ಲಿ ಹಿರಿಯ ಸಹಕಾರಿ ಡಾ. ಬಿ.ಕೆ. ನಾಗಭೂಷಣಯ್ಯರವರು ಪ್ರಮುಖರು ಇವರುಗಳ ಶ್ರಮದಿಂದ ಸಂಘವು ಇಂದು ಸಾವಿರಾರು ಅಬಲ ಜನರನ್ನು ಆರ್ಥಿಕವಾಗಿ ಸದೃಢವಾಗುವಂತೆ ಮಾಡಿದೆ. ದಿ ಭಾರತಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿಯು 1998 ರಲ್ಲಿ ಸ್ಥಾಪನೆಯಾಯಿತು. ಮೊದಲು 1800 ಜನ ಸದಸ್ಯರು ಸೇರಿ ರೂ.797.750 ಶೇರು ಬಂಡವಾಳದೊಂದಿಗೆ ಆರಂಭವಾಗಿದೆ.

ಈ ಸಂಘವು ಕಳೆದ ವರ್ಷದಲ್ಲಿ 1.02.99.250 ಶೇರು ಬಂಡವಾಳ ವರ್ಷಾಂತ್ಯಕ್ಕೆ ರೂ. 1.21.04.250 ಮುನ್ನಡೆದಿದೆ. ಪ್ರಸ್ತುತ ಸಂಘ ರೂ.4778 ಸದಸ್ಯರನ್ನು ಹೊಂದುವ ಮೂಲಕ ರೂ. 40,50,070, ನಿವ್ವಳ ಲಾಭ ಮತ್ತುರೂ. 12,95,54,074 ಠೇವಣಿ ಸತತವಾಗಿ ಲಾಭದತ್ತ ದಾಪುಗಾಲು ಹಾಕುತ್ತಿರುವುದು ಸ್ವಾಗತರ್ಹವಾದ ವಿಷಯವಾಗಿದೆ.

### ಸಂಘದ ಉದ್ದೇಶ

- ಸಂಘದ ಸದಸ್ಯರಲ್ಲಿ ಮಿತವ್ಯಯ ಕಾಪಾಡುವುದು. ಸ್ವ-ಸಹಾಯ ಮತ್ತು ಸಹಕಾರ ಭಾವನೆಗಳನ್ನು ಪ್ರೋತ್ಸಾಹಿಸುವುದು. ಸದಸ್ಯರ ಆರ್ಥಿಕ ಪರಿಸ್ಥಿತಿ ಸುಧಾರಿಸಲ ಯೋಜನೆಗಳನ್ನು ತಯಾರಿಸುವುದು ಮತ್ತು ಹಣಕಾಸಿನ ಸಹಾಯ ಮಾಡುವುದು.

### ಸಂಘದಿಂದ ನೀಡುವ ಸಾಲ

- ಆಸ್ತಿ ಪತ್ರದ ಮೇಲೆ ಸಾಲ. ಖಾಲಿ ನಿವೇಶ, ಮನೆಕಟ್ಟಲು, ಕಟ್ಟಿದ ಮನೆಯ ಮೇಲೆ ಸಾಲ. ಠೇವಣಿ ಆಧಾರದ ಮೇಲೆ ಸಾಲ. ವಿಶೇಷ ವಾಹನ ಸಾಲ. ಆಭರಣ ಸಾಲ. ರಾಷ್ಟ್ರೀಯ ಉಳಿತಾಯ ಪತ್ರ ಸಾಲ. ಸಿಬ್ಬಂದಿ ವೇತನ ಸಾಲ

**ಸಂಘದ ವೈಶಿಷ್ಟ್ಯತೆಗಳು :** ಸಂಘ ಸಂಪೂರ್ಣವಾಗಿ ಗಣಕೀರಣಗೊಂಡಿದೆ. ಪ್ರಾರಂಭ ವಾದಾಗಿನಿಂದಲೂ ಲಾಭಗಳಿಸುತ್ತ ಮುಂದುವರೆದಿದೆ. ತನ್ನ ಸದಸ್ಯರಿಗೆ ಸಕಾಲಕ್ಕೆ ಮತ್ತು ಅವಶ್ಯಕ ಸೇವೆ ಸಲ್ಲಿಸುವತ್ತ ಗಮನ ನೀಡುತ್ತಿದೆ. ಸಂಘದ ಸಿಬ್ಬಂದಿಗಳು ಲೆಕ್ಕಪತ್ರಗಳ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತ ಸದಸ್ಯರ ಆಶೋತ್ತರಗಳಿಗೆ ತಕ್ಷಣ ಸ್ಪಂದಿಸುತ್ತಾ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಾ ಬಂದಿರುವುದಲ್ಲದೆ ಅದನ್ನು ತನ್ನಕರ್ತವ್ಯದ ಭಾಗವೆಂದು ಭಾವಿಸಿ ಅನುಷ್ಠಾನಗೊಳಿಸುತ್ತಿದೆ. ಸಂಘವು ಸ್ವಂತ ಕಟ್ಟಡವನ್ನು ಹೊಂದಿದೆ.

# ಬದ್ಧತೆ, ಸೇವಾ ಮನೋಭಾವನೆ ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ಪ್ರಮುಖ ಸಾಧನ ಸಂಘದ ಅಧ್ಯಕ್ಷ ಕೆ.ಚಂದ್ರಯ್ಯ



ದಿ ಭಾರತಿ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿಯು ತನ್ನ ಗ್ರಾಹಕರು ಮತ್ತು ಸದಸ್ಯರಿಗೆ ಉತ್ತಮ ಸೇವೆ ಸಲ್ಲಿಸುತ್ತಾ, ಆರ್ಥಿಕ ಸಬಲೀಕರಣಕ್ಕೆ ನೆರವಾಗುತ್ತಾ ಬಂದಿದೆ. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾಗಿರುವ ಕೆ.ಚಂದ್ರಯ್ಯ ಅವರು ದಿ ಭಾರತಿ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿಯು ಕಳೆದ 26 ವರ್ಷಗಳಲ್ಲಿ ಉಪಯುಕ್ತ ಸೇವೆ ಸಲ್ಲಿಸುತ್ತಿದೆ. ಸಂಘದ ಸದಸ್ಯರ ಆರ್ಥಿಕ ಅಭಿವೃದ್ಧಿಗೆ ಸಾರ್ಥಕ ಸೇವೆ ಸಲ್ಲಿಸುತ್ತಾ ಬಂದಿದೆ. ಇನ್ನೂ ಹೆಚ್ಚಿನ ಮಟ್ಟದಲ್ಲಿ ಸದಸ್ಯರಿಗೆ ಆರ್ಥಿಕ ನೆರವು ನೀಡುವ ಉದ್ದೇಶವಿದೆ. ಅದಕ್ಕಾಗಿ ವಿವಿಧ ವಿನೂತ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು.

ಸಹಕಾರ ಸೇವೆಯ ಅನುಭವದೊಂದಿಗೆ ಸಂಘವನ್ನು ಲಾಭದೆಡೆಗೆ ಮುನ್ನಡೆಸಲು–ಮಾರ್ಗದರ್ಶನ ನೀಡುತ್ತಿದ್ದಾರೆ. ಪ್ರಸ್ತುತ ಅವಧಿಯಲ್ಲಿ ಶ್ರೀಯುತರು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಂಘದ ಅಧ್ಯಕ್ಷರಾಗಿ ಸೇವಾ ಬದ್ಧತೆಯ ಜೊತೆಗೆ ಆಡಳಿತ ಮಂಡಳಿ ಸದಸ್ಯರ ಪ್ರೋತ್ಸಾಹದೊಂದಿಗೆ ಸಂಘವನ್ನು ಮುನ್ನಡೆಸುತ್ತಿದ್ದಾರೆ. ಶ್ರೀಯುತರು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ಮತ್ತು ಟಿಎಪಿಎಸ್‌ಎಮ್‌ಎಸ್ ಹಾಗೂ ಇತರ ಸಂಘ–ಸಂಸ್ಥೆಗಳಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಸಂಘದ ಸೇವೆಗಳು, ದೂರದೃಷ್ಠಿಯ ಬಗ್ಗೆ ಅವರು ತಮ್ಮ ಮನದಾಳದ ಮಾತುಗಳನ್ನು ವ್ಯಕ್ತಪಡಿಸಿದರು. ಸಹಕಾರ ವಲಯದಲ್ಲಿ ಕ್ರಿಯಾಶೀಲರಾಗಿರುವ ಇವರು "ಸಹಕಾರ ಕ್ಷೇತ್ರದಿಂದಲೇ ಜನರ ಸಮೃದ್ಧಿ" ಎನ್ನುವ ಆಶಯವನ್ನು ಹೊಂದಿದ್ದಾರೆ. ಸಹಕಾರ ಕ್ಷೇತ್ರ ಇನ್ನಷ್ಟು ಪ್ರಬಲವಾಗಿ ಬೆಳೆಯಬೇಕು. ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರ ಕ್ಷೇತ್ರದಲ್ಲಿ ಪಾಲ್ಗೊಳಬೇಕು. ಈ ಮೂಲಕ ಜನಸಾಮಾನ್ಯರ ಸಬಲೀಕರಣಕ್ಕೆ ಪೂರಕವಾಗಬೇಕು ಎಂಬ ಅಭಿಲಾಷೆ ಇಟ್ಟುಕೊಂಡಿದ್ದಾರೆ.

| ಸಂಘದ ಮೂರು ವರ್ಷದ ಪ್ರಗತಿ ಪಕ್ಷಿ ನೋಟ (ರೂ. ಲಕ್ಷಗಳಲ್ಲಿ) | | | |
|---|---|---|---|
| **ಆರ್ಥಿಕ ವರ್ಷ** | **2020–21** | **2021–22** | **2022–23** |
| ಸದಸ್ಯರ ಸಂಖ್ಯೆ | 4623 | 4682 | 4778 |
| ಷೇರು ಬಂಡವಾಳ | 89,13,750 | 102.99.520 | 12104250 |
| ಠೇವಣಿಗಳು | 9,89,68,920 | 12.96.39.200 | 12,95,54,073 |
| ದುಡಿಯುವ ಬಂಡವಾಳ | 12,27,42,286 | 15.67.99.640 | 16,09,23,442 |
| ನಿವ್ವಳ ಲಾಭ | 20,78,629 | 29.44.099 | 40,50,070 |

**ಆಡಳಿತ ಮಂಡಳಿ**

**ಅಧ್ಯಕ್ಷರು : ಕೆ. ಚಂದ್ರಯ್ಯ**

**ಉಪಾಧ್ಯಕ್ಷರು : ಸಿ. ಸೋಮೇಗೌಡ**

**ನಿರ್ದೇಶಕರುಗಳು : ದೊಡ್ಡವೀರಯ್ಯ, ಆರ್. ಚಿಕ್ಕಭೈರೇಗೌಡ, ಕೆ.ಪಿ. ಉಮೇಶ, ಎ.ಆರ್. ಚಂದ್ರಶೇಖರ್ ಹೆಚ್.ಎಸ್. ಸಿದ್ದರಾಜು, ಎ.ಜಿ. ಗಂಗಾಧರಗೌಡ, ದೊರೆಸ್ವಾಮಿ, ಎಂ. ಮಲ್ಲಪ್ಪ, ವೆಂಕಟಸ್ವಾಮಿ, ಅಕ್ಕಲಪ್ಪ, ಸುಮಿತ್ರಮ್ಮ, ರುಕ್ಮಿಣಿ**

**ಮುಖ್ಯಕಾರ್ಯನಿರ್ವಹಣಾಧಿಕಾರಿ : ಬಿ.ಎಸ್. ಸುರೇಶ್**

# ವಿಶ್ವ ಪರಿಸರ ದಿನಾಚರಣೆ - 2024

# ಮಾನವನಾಸೆಗೆ ಕೊನೆಯಿಲ್ಲ, ಪರಿಸರ ನಾಶವೂ ನಿಂತಿಲ್ಲ



▶▶ ಸವಿತಾ ನಾಯ್ಕ್, ಬೆಂಗಳೂರು.

**ಅಭಿವೃದ್ಧಿಯ ಹೆಸರಿನಲ್ಲಿ ಬೆಂಗಳೂರು ಮಹಾನಗರ ನಿಯಂತ್ರಣ ಮೀರಿ ಬೆಳೆದಿದೆ. ಎಲ್ಲಿ ಕಣ್ಣು ಹಾಯಿಸಿದರು ಬಹುಮಹಡಿ ಕಾಂಕ್ರೀಟ್ ಕಟ್ಟಡಗಳೇ ಕಣ್ಣಿಗೆ ರಾಚುತ್ತಿವೆ, ನಗರದಲ್ಲಿ ಕೆರೆಗಳನ್ನು ಒತ್ತುವರಿ ಮಾಡಿ ಬಡಾವಣೆಗಳನ್ನು ನಿರ್ಮಿಸಲಾಗಿದೆ, ಉದ್ಯಾನನಗರಿ, ಹವಾನಿಯಂತ್ರಿತ ನಗರಿ ಎಂಬ ಎಂಬ ಹೆಗ್ಗಳಿಕೆ ಮಾಯವಾಗುತ್ತಿದೆ. 2024 ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿನ ತಾಪಮಾನ 40 ಡಿಗ್ರಿ ಸೆಲ್ಸಿಯಸ್‌ತನಕ ತಲುಪಿ ದಾಖಲೆ ನಿರ್ಮಿಸಿದೆ. 160 ದಿನಗಳ ತನಕ ಬೆಂಗಳೂರಿಗೆ ಮಳೆ ಬರದೆ ನಗರವಾಸಿಗಳು ಉರಿ ಬಿಸಿಲಿಗೆ ಕಂಗಾಲಾದರು. ಒಂದುವರೆ ಕೋಟಿ ಜನಸಂಖ್ಯೆ ಇರುವ ಬೆಂಗಳೂರು ನಗರದಲ್ಲಿ ಒಂದು ಕೋಟಿಗೂ ಅಧಿಕ ವಾಹನಗಳಿವೆ. ಅವುಗಳಲ್ಲಿ ದ್ವಿಚಕ್ರವಾಹನಗಳ ಸಂಖ್ಯೆ 70 ಲಕ್ಷಕ್ಕೂ ಅಧಿಕ. ಈ ವಾಹನಗಳು ಪ್ರತಿದಿನ ಬಿಡುವ ವಿಷಕಾರಿ ಹೊಗೆ ಸೇವಿಸುವ ನಾಗರಿಕರ ಪರಿಸ್ಥಿತಿ ನೆನೆಸಿಕೊಂಡರೆ ಭಯವಾಗುತ್ತದೆ. ಮುಂದೊಂದು ದಿನ ಪ್ರತಿಯೊಬ್ಬರು ಶುದ್ದಗಾಳಿಗಾಗಿ ಆಕ್ಸಿಜನ್ ಮಾಸ್ಕ್ ಬೆನ್ನಿಗೆ ಕಟ್ಟಿಕೊಂಡು ಓಡಾಡುವ ಪರಿಸ್ಥಿತಿ ಬರಬಹುದು.**

2024ರ ವಿಶ್ವ ಪರಿಸರ ದಿನವನ್ನು "ಭೂಮಿಯ ಪುನಃ ಸ್ಥಾಪನೆ" ಎಂಬ ಘೋಷವಾಕ್ಯದಡಿಯಲ್ಲಿ ಆಚರಿಸಲಾಗುತ್ತದೆ.

ಮನುಷ್ಯನಿಗೆ ಭೂಮಿಯ ಅಗತ್ಯವಿದೆ ವಿನಹ, ಭೂಮಿಗೆ ಮನುಷ್ಯನ ಅಗತ್ಯವಿಲ್ಲ. ಈ ಭೂಮಿ ಹಾಗೂ ಪರಿಸರ ಮತ್ತು ಅದರಲ್ಲಿರುವ ಪಶುಪಕ್ಷಿ, ಪ್ರಾಣಿಗಳು, ಗಿಡಮರ ನದಿಗಳು ಮನುಷ್ಯನಿಲ್ಲದಿದ್ದರು ತಮ್ಮ ಅಸ್ಥಿತ್ವ ಉಳಿಸಿಕೊಳ್ಳುವ ಸಾಮರ್ಥ್ಯ ಹೊಂದಿವೆ. ಆದರೆ, ಗಿಡಮರ, ನದಿಗಳು ಇಲ್ಲದಿದ್ದರೆ ಮನುಷ್ಯ ಭೂಮಿಯ ಮೇಲೆ ತನ್ನ ಅಸ್ಥಿತ್ವ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ, ಮನುಷ್ಯ ಪರಾವಲಂಬಿ ಜೀವಿ. ಆತ ಬದುಕಲು ನೀರು, ಗಾಳಿ, ಗಿಡಮರ, ಪಶುಪಕ್ಷಿಗಳ ಅಗತ್ಯವಿದೆ.

ಆದರೆ, ಇಂದು ಸ್ವಾರ್ಥ ಮತ್ತು ದುರಾಸೆಯಿಂದ ಕೂಡಿದ ಮನುಷ್ಯ ಇಡೀ ಭೂಮಂಡಲವನ್ನೆ ತನ್ನ ಕಪಿಮುಷ್ಠಿಗೆ ತೆಗೆದುಕೊಳ್ಳಲು ನಿರಂತರವಾಗಿ ಪ್ರಯತ್ನ ನಡೆಸುತ್ತಿದ್ದು, ಈ ಹಿನ್ನಲೆಯಲ್ಲಿ ನದಿ, ಸಮುದ್ರ, ಅರಣ್ಯ, ಮರುಭೂಮಿ, ಪಶುಪಕ್ಷಿಗಳು ಹಾಗೂ ವನ್ಯಜೀವಿಗಳ ಸಹಿತ ಪ್ರತಿಯೊಂದರ ಮೇಲೂ ಏಕಸ್ವಾಮ್ಯದಿಂದ ಅಧಿಕಾರ ಚಲಾಯಿಸಲು ನಿರಂತರ ಪ್ರಯತ್ನಶೀಲನಾಗಿದ್ದಾನೆ. ಭೂಮಂಡಲದಲ್ಲಿರುವ ಮೂಕ ಪ್ರಾಣಿಗಳ, ಗಿಡಮರಗಳ ಹಾಗೂ ಹರಿಯುವ ನದಿಯ ನೈಸರ್ಗಿಕ ಅಧಿಕಾರ ಮೊಟಕುಗೊಳಿಸಿ ಅದರ ಮೇಲೆ ಸವಾರಿ ಮಾಡಲು ಮುಂದಾಗಿದ್ದಾನೆ.

ಮಾನವನ ಕಲ್ಯಾಣವನ್ನು ಮಾತ್ರ ದೃಷ್ಟಿಯಲ್ಲಿಟ್ಟು ಕೊಂಡು ನೂರಾರು ರೀತಿಯ ಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯದಲ್ಲಿ ನಿರಂತರವಾಗಿ ತೊಡಗಿರುವ ಮನುಷ್ಯ ಈ ಭೂಮಿಯ ಮೇಲೆ ಬದುಕಲು ಮನುಷ್ಯನಷ್ಟೇ ಸಮಾನ ಹಕ್ಕು ಹೊಂದಿರುವ ಪ್ರಾಣಿ, ಪಕ್ಷಿ, ಕ್ರಿಮಿಕೀಟ, ಗಿಡಮರ ಹಾಗೂ ಜಲಚರಗಳನ್ನು ನಿರಂತರವಾಗಿ ನಾಶ ಮಾಡುವ ಕಾರ್ಯದಲ್ಲಿ ನಿರತನಾಗುವ ಮೂಲಕ ತನ್ನ ಅಂತ್ಯಕ್ಕೆ ನಾಂದಿ ಹಾಡುತ್ತಿದ್ದಾನೆ. ಆಧುನಿಕ ಮನುಷ್ಯನ ಜೀವನ ಶೇಕಡ 90 ರಷ್ಟು ಅಭಿವೃದ್ಧಿ ಹಾಗೂ ಅಭಿವೃದ್ಧಿ ಕಾರ್ಯಗಳು ಮಾನವ ಕೇಂದ್ರಿತವಾಗಿದ್ದು, ಇದು ಪರಿಸರಕ್ಕೆ ಸಂಪೂರ್ಣವಾಗಿ ಮಾರಕವಾಗಿದೆ ಎಂಬುದು ಕಟು ಸತ್ಯವಾಗಿದೆ.

ಈ ಎಲ್ಲಾ ಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯಗಳು ಮನುಷ್ಯನಿಗೆ ಅಂತಿಮವಾಗಿ ಸುಖ ಮತ್ತು ಆರೋಗ್ಯ ನೀಡುವುದರ ಬದಲು ಆತನನ್ನು ಇನಷ್ಟು ರೋಗಗ್ರಸ್ತನನ್ನಾಗಿ ಮಾಡುವುದರೊಂದಿಗೆ ಸುಖ-ಶಾಂತಿ, ನೆಮ್ಮದಿಯನ್ನು ಕಸಿದುಕೊಂಡಿದೆ. ಒಟ್ಟಾರೆಯಾಗಿ ಮನುಷ್ಯ ತಾನು ನೇಯ್ದ ಬಲೆಯಲ್ಲಿ ಸಿಕ್ಕಿಹಾಕಿಕೊಂಡು ಹೊರಗೆ ಬರಲಾರದೆ ವಿಲಿವಿಲಿ ಒದ್ದಾಡುತ್ತಿದ್ದಾನೆ.

### ಪರಿಸರ ಮಾಲಿನ್ಯದ ಚಕ್ರವ್ಯೂಹದಲ್ಲಿ ಮಾನವ ಸಂತತಿ

ಭಾರತದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಮಾಲಿನ್ಯ ನಿಯಂತ್ರಣಕ್ಕಾಗಿ ಹಲವು ಕ್ರಮಗಳನ್ನು ಕೈಗೊಂಡಿದ್ದರೂ ಯಾವ ಪ್ರಯೋಜನವೂ ಆಗಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆಯ ವರದಿ ಹೇಳುತ್ತಿದೆ. ಅತಿ ಹೆಚ್ಚು ಪ್ರಮಾಣದಲ್ಲಿ ವಾಯುಮಾಲಿನ್ಯವಿರುವ ವಿಶ್ವದ 15 ನಗರಗಳಲ್ಲಿ 13 ನಗರಗಳು ಭಾರತದಲ್ಲೇ ಇವೆ ಎಂದು ಎಚ್ಚರಿಸಿದೆ. ದೇಶದ ರಾಜಧಾನಿ ದೆಹಲಿ ಜನರೇ ಶುದ್ಧಗಾಳಿಗಾಗಿ



ಆಕ್ಸಿಜನ್ ಬಾರ್‌ಗಳ ಮೊರೆ ಹೋಗುತ್ತಿದ್ದಾರೆ ಎಂದರೆ ವಾಯು ಮಾಲಿನ್ಯದ ತೀವ್ರತೆ ಅರ್ಥವಾಗುತ್ತದೆ.

ವಾಹನಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಮತ್ತು ಪರಿಸರಕ್ಕೆ ಹಾನಿ ಮಾಡುವ ಇಂಧನಗಳ ಬಳಕೆಯೇ ವಾಯುಮಾಲಿನ್ಯಕ್ಕೆ ಪ್ರಮುಖ ಕಾರಣಗಳಾಗಿವೆ. ಈಗಲೂ ಕೆಲವು ಹಳ್ಳಿಗಳಲ್ಲಿ ಅಡುಗೆಗಾಗಿ ಕಟ್ಟಿಗೆಗಳನ್ನು ಉರುವಲಾಗಿ ಬಳಸುತ್ತಿರುವುದು, ಬೆಳೆ ತಾಜ್ಯಗಳನ್ನು ಸುಡುತ್ತಿರುವುದು, ರಾಸಾಯನಿಕ ಗೊಬ್ಬರಗಳು, ಕೀಟ ನಿಯಂತ್ರಕ ಔಷಧಿಗಳು, ಕೈಗಾರಿಕೆಗಳು ಹೊರಸೂಸುತ್ತಿರುವ ಅಪಾಯಕಾರಿ ರಾಸಾಯನಿಕಗಳು, ಮಿತಿ ಮೀರಿದ ಪ್ಲಾಸ್ಟಿಕ್ ಬಳಕೆ ಮಾಲಿನ್ಯಕ್ಕೆ ಕಾರಣಗಳು.

ದೇಶದಲ್ಲಿ ಸುಮಾರು 14 ಕೋಟಿ ಜನ ಕಲುಷಿತ ಗಾಳಿಯನ್ನೇ ಸೇವಿಸಿ ಸಾವಿಗೆ ಸನಿಹವಾಗುತ್ತಿದ್ದಾರೆ. 2017ರಲ್ಲಿ ಸುಮಾರು 2 ಲಕ್ಷ ಮಕ್ಕಳು ವಾಯು ಮಾಲಿನ್ಯದಿಂದಾಗಿಯೇ ಜೀವ ಕಳೆದುಕೊಂಡಿದ್ದಾರೆ. 2024 ರಲ್ಲಿ ಈ ಸಂಖ್ಯೆ ಅಪಾಯಕಾರಿ ಮಟ್ಟದಲ್ಲಿಹೆಚ್ಚಾಗಲಿದೆ. ಬಿಡಿಸಿ ಹೇಳುವುದಾದರೆ ಪ್ರತಿ ಮೂರು ನಿಮಿಷಕ್ಕೊಂದು ಮಗು ಸಾಯುತ್ತಿದೆ ಎನ್ನುತ್ತಿವೆ ಕೆಲವು ವರದಿಗಳು. ಅಕಾಲಿಕವಾಗಿ ಸಾವಿಗೀಡಾಗುತ್ತಿರುವವರ ಪೈಕಿ ಶೇ.26 ರಷ್ಟು ಮಂದಿ ಮಾಲಿನ್ಯ ಕಾರಣಗಳಿಂದಾಗಿಯೇ ಜೀವ ಕಳೆದುಕೊಳ್ಳುತ್ತಿದ್ದಾರೆ.

ಹಸಿರು ಮನೆ ವಾತಾವರಣದ ಮೇಲೆ ದುಷ್ಪರಿಣಾಮ ಬೀರುವ ರಾಸಾಯನಿಕಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಿಡುಗಡೆ ಮಾಡುತ್ತಿರುವ ದೇಶಗಳ ಪೈಕಿ ಭಾರತ ಮೂರನೇ ಸ್ಥಾನದಲ್ಲಿದೆ. ಮೊದಲೆರಡು ಸ್ಥಾನಗಳಲ್ಲಿ ಕ್ರಮವಾಗಿ ಅಮೆರಿಕ ಮತ್ತು ಚೀನಾ ಇವೆ.

ಗ್ಲೋಬಲ್ ಎನ್ವಿರಾನ್‌ಮೆಂಟ್ ಪರ್ಫಾಮೆನ್ಸ್ ಇಂಡೆಕ್ಸ್ (ಇಪಿಐ) ಪ್ರಕಾರ 2016ರಲ್ಲಿ, ಭಾರತ 141ನೇ ರ್‍ಯಾಂಕ್‌ನಲ್ಲಿತ್ತು. 2017ರಲ್ಲಿ ಇನ್ನಷ್ಟು ಕುಸಿದು 177ನೇ ಸ್ಥಾನಕ್ಕೆ ತಲುಪಿತು.

ಇಪಿಐ ಪ್ರಕಾರ ಶುದ್ಧಗಾಳಿ ಪೂರೈಸುವ ರಾಷ್ಟ್ರಗಳಲ್ಲಿ ಭಾರತದ ಸಾಧನೆ ಕೇವಲ ಶೇ. 5.75 ಆಗಿದ್ದರೆ, ಜಪಾನ್ ಮತ್ತು ಸ್ವಿಟ್ಜರ್ಲೆಂಡ್ ರಾಷ್ಟ್ರಗಳು ಶೇ. 90ರಷ್ಟು ಪ್ರಗತಿ ಸಾಧಿಸಿವೆ.

ಈ ಎಲ್ಲ ಮಾಲಿನ್ಯಗಳು ದೇಶದ ಆರ್ಥಿಕ ವ್ಯವಸ್ಥೆ ಮೇಲೂ ಪ್ರಭಾವ ಬೀರುತ್ತಿವೆ. ಮಾಲಿನ್ಯ ನಿಯಂತ್ರಣಕ್ಕೆ ಕಠಿಣ ಕ್ರಮಗಳನ್ನು ಕೈಗೊಳ್ಳದಿದ್ದರೆ ಮನುಷ್ಯನ ಉಳಿವು ಪ್ರಶ್ನಾರ್ಥಕವಾಗಲಿದೆ.

### ನದಿಗಳೂ ಸ್ವಚ್ಛವಾಗಿಲ್ಲ

ನದಿಗಳನ್ನು ಪವಿತ್ರ ಎಂದು ಭಾವಿಸುವ ಭಾರತದಲ್ಲಿನ ಯಾವ ನದಿಯೂ ಸಂಪೂರ್ಣ ಸ್ವಚ್ಛವಾಗಿಲ್ಲ. ದೇಶದ ಅತಿದೊಡ್ಡ ನದಿ ಗಂಗಾ ತಟದಲ್ಲೇ ಕೋಟ್ಯಂತರ ಮಂದಿ ವಾಸಿಸುತ್ತಿದ್ದಾರೆ. ದೇಶದಲ್ಲಿ 241 ನದಿಗಳಿದ್ದು, ಇವುಗಳಲ್ಲಿ 121 ನದಿಗಳು ಸಂಪೂರ್ಣ ಕಲುಷಿತವಾಗಿವೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ವರದಿ ಬಹಿರಂಗಪಡಿಸಿದೆ.

### ಮಾಲಿನ್ಯ ನಗರವಾಗುತ್ತಿರುವ ಬೆಂಗಳೂರು

ಅಭಿವೃದ್ಧಿಯ ಹೆಸರಿನಲ್ಲಿ ಬೆಂಗಳೂರು ಮಹಾನಗರ ನಿಯಂತ್ರಣ ಮೀರಿ ಬೆಳೆದಿದೆ. ಎಲ್ಲಿ ಕಣ್ಣು ಹಾಯಿಸಿದರು ಬಹುಮಹಡಿ ಕಾಂಕ್ರಿಟ್ ಕಟ್ಟಡಗಳೇ ಕಣ್ಣಿಗೆ ರಾಚುತ್ತಿವೆ, ನಗರದಲ್ಲಿ ಕೆರೆಗಳನ್ನು ಒತ್ತುವರಿ ಮಾಡಿ ಬಡಾವಣೆಗಳನ್ನು ನಿರ್ಮಿಸಲಾಗಿದೆ, ಉದ್ಯಾನನಗರಿ, ಹವಾನಿಯಂತ್ರಿತ ನಗರಿ ಎಂಬ ಎಂಬ ಹೆಗ್ಗಳಿಕೆ ಮಾಯವಾಗುತ್ತಿದೆ. 2024 ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿನ ತಾಪಮಾನ 40 ಡಿಗ್ರಿ ಸೆಲ್ಸಿಯಸ್‌ತನಕ ತಲುಪಿ ದಾಖಲೆ ನಿರ್ಮಿಸಿದೆ. 160 ದಿನಗಳ ತನಕ ಬೆಂಗಳೂರಿಗೆ ಮಳೆ ಬರದೆ ನಗರವಾಸಿಗಳು ಉರಿ ಬಿಸಿಲಿಗೆ ಕಂಗಾಲಾದರು. ಒಂದುವರೆ ಕೋಟಿ ಜನಸಂಖ್ಯೆ ಇರುವ ಬೆಂಗಳೂರು ನಗರದಲ್ಲಿ ಒಂದು ಕೋಟಿಗೂ ಅಧಿಕ ವಾಹನಗಳಿವೆ. ಅವುಗಳಲ್ಲಿ ದ್ವಿಚಕ್ರವಾಹನಗಳ ಸಂಖ್ಯೆ 70 ಲಕ್ಷಕ್ಕೂ ಅಧಿಕ. ಈ ವಾಹನಗಳು ಪ್ರತಿದಿನ ಬಿಡುವ ವಿಷಕಾರಿ ಹೊಗೆ ಸೇವಿಸುವ ನಾಗರಿಕರ ಪರಿಸ್ಥಿತಿ ನೆನೆಸಿಕೊಂಡರೆ ಭಯವಾಗುತ್ತದೆ. ಮುಂದೊಂದು ದಿನ ಪ್ರತಿಯೊಬ್ಬರು ಶುದ್ಧಗಾಳಿಗಾಗಿ ಆಕ್ಸಿಜನ್ ಮಾಸ್ಕ್ ಬೆನ್ನಿಗೆ ಕಟ್ಟಿಕೊಂಡು ಓಡಾಡುವ ಪರಿಸ್ಥಿತಿ ಬರಬಹುದು.

### ಪರಿಸರ ಮಾಲಿನ್ಯವನ್ನು ತಡೆಗಟ್ಟುವ ವಿಧಾನಗಳು


ಪರಿಸರವನ್ನು ಮಾಲಿನ್ಯರಹಿತಗೊಳಿಸುವುದು ಹಿಂದೆಂದಿಗಿಂತಲೂ ಇಂದು ಹೆಚ್ಚು ಅವಶ್ಯವಾಗಿದೆ. ಏಕೆಂದರೆ ಪರಿಸರ ಇಂದು ವ್ಯಾಪಕವಾಗಿ ಹಾಳಾಗುತ್ತಿದೆ. ಇದೇ ವೇಗದಲ್ಲಿ ವಿಷವಸ್ತುಗಳು, ರಾಸಾಯನಿಕ ಪದಾರ್ಥಗಳು, ತ್ಯಾಜ್ಯಗಳು ಪರಿಸರವನ್ನು ಸೇರುತ್ತಿದ್ದರೆ ಸಮಸ್ತ ಜೀವಸಂಕುಲದ ನಾಶ ಖಂಡಿತ. ಆದ್ದರಿಂದ ಇಂದು ನಾವು ಕೆಲವೊಂದು ಅಗತ್ಯ ಕ್ರಮಗಳನ್ನು ಸಮಾರೋಪಾದಿಯಲ್ಲಿ ಕೈಗೊಳ್ಳಲೇಬೇಕಾಗಿದೆ.



- ಕೃಷಿಯಲ್ಲಿ ರಾಸಾಯನಿಕ ಗೊಬ್ಬರಗಳು, ಕ್ರಿಮಿನಾಶಕಗಳ ಬಳಕೆಯನ್ನು ನಿಲ್ಲಿಸಬೇಕು. ಬದಲಾಗಿ ನೈಸರ್ಗಿಕ ಸಾವಯವ ಗೊಬ್ಬರ ಬಳಸಿ ಕೃಷಿ ಮಾಡಬೇಕು.
- ಬೃಹತ್ ಕೈಗಾರಿಕೆಗಳ ಸ್ಥಾಪನೆ ನಿಲ್ಲಬೇಕು.
- ಆಹಾರ ತ್ಯಾಜ್ಯಗಳು, ಮತ್ತಿತರೆ ಕೊಳೆಯುವ ವಸ್ತುಗಳನ್ನು ನದಿ, ಕೆರೆ, ಸರೋವರಗಳಿಗೆ ಬಿಡಬಾರದು. ಬದಲಾಗಿ ತ್ಯಾಜ್ಯಗಳನ್ನು ಬಳಸಿ ಗೊಬ್ಬರ ತಯಾರಿಸಬಹುದು.
- ಕಟ್ಟಿಗೆ, ದ್ರವೀಕೃತ ಅನಿಲ ಇಂಧನಗಳನ್ನು ಅಡುಗೆಗೆ ಉರುವಲಾಗಿ ಉಪಯೋಗಿಸುವ ಬದಲು, ಸೌರಶಕ್ತಿ ಬಳಸಬಹುದು. ಇಂಧನ ಗಳನ್ನು ಮಿತವಾಗಿ ಅಗತ್ಯ ಇರುವಷ್ಟೇ ಬಳಸಬೇಕು. ವಾಹನಗಳು, ದೀಪಗಳು, ಸ್ಟೌವ್ ಮೊದಲಾದವುಗಳನ್ನು ಅಗತ್ಯ ಇಲ್ಲದಿರುವಾಗ ನಂದಿಸಬೇಕು.
- ಉಳಿದಿರುವ ಅರಣ್ಯವನ್ನು ಸಂರಕ್ಷಿಸಬೇಕು. ಜೊತೆಗೆ ವನಮಹೋತ್ಸವಗಳಂತಹ ಆಚರಣೆಗಳಿಂದ ಹೊಸದಾಗಿ ಗಿಡ ನೆಟ್ಟು ವೃಕ್ಷ ಸಂಪತ್ತನ್ನು ಹೆಚ್ಚಿಸಬೇಕು. ಇದರಿಂದ ಬೇಸಗೆ ದಿನಗಳಲ್ಲಿ ತಂಪಾದ ವಾತಾವರಣವುಂಟಾಗಿ ಏರ್‌ಕೂಲರ್ / ಫ್ರಿಡ್ಜ್ / ಪಂಖಗಳ ಬಳಕೆ ಕಡಿಮೆಯಾಗುತ್ತದೆ.
- ಧೂಮಪಾನ ನಿಲ್ಲಿಸಬೇಕು.
- ವಾಹನಗಳ ನಿರ್ವಹಣೆ ಸರಿಯಾಗಿರಬೇಕು. ವಾಹನದ ಯಂತ್ರಗಳ ಕಾರ್ಯಕ್ಷಮತೆ ಹೆಚ್ಚಿಸಾಲು ಮತ್ತು ಇಂಧನದ ಉಳಿತಾಯಕ್ಕಾಗಿ ಅವು ಯಾವಾಗಲೂ ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬೇಕು.
- ಹೆಚ್ಚಿನ ಓಡಾಟಕ್ಕೆ ಸಾರ್ವಜನಿಕ ಸಾರಿಗೆಯನ್ನೇ ಉಪಯೋಗಿಸ ಬೇಕು. ಕಡಿಮೆ ದೂರದ ಸ್ಥಳಗಳಿಗೆ ನಡೆದುಕೊಂಡು ಹೋಗುವುದು ಆರೋಗ್ಯದ ದೃಷ್ಟಿಯಿಂದಲೂ ಕೂಡ ಉತ್ತಮ ಮತ್ತು ಪರಿಸರಕ್ಕೂ ಒಳ್ಳೆಯದು.
- ಕೈಗಾರಿಕೆಗಳಿಂದ ಹೊರಬರುವ ಕಲುಷಿತ ರಾಸಾಯನಿಕ ಮತ್ತು ವಿಷಯುಕ್ತ ನೀರು ಮತ್ತು ಅನಿಲಗಳನ್ನು ಶುದ್ಧೀಕರಿಸಿಯೇ ಹೊರಬಿಡಬೇಕು. ಈ ನಿಟ್ಟಿನಲ್ಲಿ ಸರ್ಕಾರಗಳು ಕೈಗಾರಿಕೆಗಳಿಗೆ ಕಠಿಣ ಕಾನೂನನ್ನು ಜಾರಿಗೆ ತರುವುದು ಅಗತ್ಯವಿದೆ.
- ಶಾಲೆ ಕಾಲೇಜುಗಳಲ್ಲಿ ಪರಿಸರ ಮಾಲಿನ್ಯ ತಡೆಗಟ್ಟುವ ಕುರಿತಾಗಿ ಹೆಚ್ಚಿನ ಪರಿಣಾಮಕಾರಿಯಾದ ಶಿಕ್ಷಣ ವ್ಯವಸ್ಥೆ ಜಾರಿಗೆ ತರಬೇಕು.

ಹೀಗೆ ನಾವು ಈಗಲಾದರೂ ಎಚ್ಚೆತ್ತುಕೊಳ್ಳದಿದ್ದರೆ ಈ ಭೂಮಿ ಮುಂದೊಂದು ದಿನ ವಾಸಯೋಗ್ಯ ಆಗದಿರಬಹುದು. ನಮ್ಮ ಮುಂದಿನ ಪೀಳಿಗೆಗೆ ಇದನ್ನು ಸಂರಕ್ಷಿಸಬೇಕಾದ ಅನಿವಾರ್ಯತೆ ನಮಗಿದೆ. ಇದಕ್ಕೆ ಎಲ್ಲರೂ ಕಟಿಬದ್ಧರಾದರೆ, ಮಾತ್ರ ಈ ಮನುಕುಲದ, ಸಮಸ್ತ ಜೀವಸಂಕುಲದ, ಭೂಮಂಡಲದ ಉಳಿವು ಸಾಧ್ಯ.

## ಆತ್ಮಶಕ್ತಿ ವಿವಿಧೋದ್ಧೇಶ ಸಹಕಾರಿ ಸಂಘದ 31ನೇ ನೂತನ ಎಲ್ಯಾರ್ ಪದವು ಶಾಖೆಯ ಶುಭಾರಂಭ




ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ನಿಯಮಿತ ಇದರ 31ನೇ ನೂತನ ಎಲ್ಯಾರ್ ಪದವು ಶಾಖೆ ಹೋಲಿಕ್ರಾಸ್ ಚರ್ಚ್‌ನ ಬಳಿಯಿರುವ ಶರೂನ್ ಸ್ಕ್ವರ್ ನಲ್ಲಿ. ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ನೂತನ ಶಾಖೆಯನ್ನು ಉದ್ಘಾಟಿಸಿದರು. ನಿವೃತ್ತ ಮುಖ್ಯ ಶಿಕ್ಷಕ ರವೀಂದ್ರ ರೈ ಕಲ್ಲಿಮಾರು, ಎಲ್ಯಾರ್ ಪದವು ಹಾಲು ಉತ್ಪಾದಕರ ಸಂಘದ ಅಧ್ಯಕ್ಷೆ ಎಡ್ವೈನ್ ಐಮನ್, ಕಟ್ಟಡದ ಮಾಲಕ ರೆನೋಲ್ಡ್ ಜಿ ಅಮ್ಮಣ್ಣ .ಪಜೀರ್ ಗೋಶಾಲೆಯ ಟ್ರಸ್ಟಿ ಶಿವಪ್ರಸಾದ್, ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ, ಉಪಾಧ್ಯಕ್ಷರಾದ ನೇಮಿರಾಜ್ ಪಿ., ನಿರ್ದೇಶಕರಾದ ಪರಮೇಶ್ವರ ಪೂಜಾರಿ, ಆನಂದ ಎಸ್. ಕೊಂಡಾಣ, ಚಂದ್ರಹಾಸ ಮರೋಳಿ, ಗೋಪಾಲ್ ಎಂ. ಸಲಹೆಗಾರರಾದ ಅಶೋಕ್ ಕುಮಾರ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಸೌಮ್ಯವಿಜಯ್ ಉಪಸ್ಥಿತರಿದ್ದರು.